# ಪ್ರಥಮ ಸಂಕಲನಾತ್ಮಕ ಮೌಲ್ಯಮಾಪನ ಪರೀಕ್ಷೆ –2022–23

## ಮಾದರಿ ಉತ್ತರ ಪತ್ರಿಕೆ (ಕಲಿಕಾ ಫಲ ಆಧಾರಿತ)

### 9ನೇ ತರಗತಿ – ಕನ್ನಡ

**ಗರಿಷ್ಠ ಅಂಕ : 100** **ಅವಧಿ:3.ಗಂಟೆ 15 ನಿಮಿಷ**

---

**I. ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ಕೊಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ.**

**1. ಕ, ಗ, ಎ, ಬ, ಅ, ಚ, ಔ, ಶ, ಯ, ಋ, ಠ – ಇವುಗಳಲ್ಲಿರುವ ಸ್ವರಾಕ್ಷರಗಳ ಸಂಖ್ಯೆ ;** **1*6=6**

(ಎ) 4 (ಬಿ) 7

(ಸಿ) 5 (ಡಿ) 11

**ಉತ್ತರ :** (ಎ) 4

**2. ಕೆಳಗೆ ನೀಡಿರುವ ಆಯ್ಕೆಗಳಲ್ಲಿ ಸರಿಯಾದ ಶಬ್ದರೂಪ ;**

(ಎ) ಕಠ್ವಡ (ಬಿ) ಕಠ್ಠಡ

(ಸಿ) ಕಟ್ಠಡ (ಡಿ) ಕಟ್ಟಡ

**ಉತ್ತರ :** (ಡಿ) ಕಟ್ಟಡ

**3. ಮರದ ಮೇಲಿರುವ ಗಿಳಿಗಳನ್ನು ಸೋಮು ನೋಡುತ್ತಿದ್ದಾನೆ. –ಈ ವಾಕ್ಯದಲ್ಲಿರುವ ಕ್ರಿಯಾಪದ;**

(ಎ) ಮರದ (ಬಿ) ಗಿಳಿಗಳನ್ನು

(ಸಿ) ಸೋಮು (ಡಿ) ನೋಡುತ್ತಿದ್ದಾನೆ

**ಉತ್ತರ :** (ಡಿ) ನೋಡುತ್ತಿದ್ದಾನೆ

**4. ಕಾಡು – ಈ ಪದದ ನಾನಾರ್ಥಕ ಪದಗಳು ;**

(ಎ) ಅರಣ್ಯ – ಅತಿ (ಬಿ) ಅರಣ್ಯ – ಪೀಡಿಸು

(ಸಿ) ವನ – ಬೆಟ್ಟ (ಡಿ) ಅರಣ್ಯ – ಮೃಗ

**ಉತ್ತರ :** (ಬಿ) ಅರಣ್ಯ – ಪೀಡಿಸು

**5. ಭೂತಕಾಲ ರೂಪದಲ್ಲಿರುವ ವಾಕ್ಯ ;**

(ಎ) ಬಾಲಕ ಪಾಠ ಓದಿದನು. (ಬಿ) ಬಾಲಕ ಪಾಠ ಓದುತ್ತಿದ್ದಾನೆ.

(ಸಿ) ಬಾಲಕಿ ಪಾಠ ಓದುವಳು. (ಡಿ) ಬಾಲಕಿ ಪಾಠ ಓದುತ್ತಿದ್ದಾಳೆ.

**ಉತ್ತರ :** (ಎ) ಬಾಲಕ ಪಾಠ ಓದಿದನು.

**6. ಈ ಕೆಳಗಿನವುಗಳಲ್ಲಿ ಸರಿಯಾದ ಅಕರಾದಿ ರೂಪ ;**

(ಎ) ಆಕಾಶ, ದಿನಾಲು, ರೈತ, ಒಮ್ಮೆ, ಹದ್ದಿನ, ದಿನ (ಬಿ) ಆಕಾಶ, ದಿನ, ದಿನಾಲು, ರೈತ, ಹದ್ದಿನ, ಒಮ್ಮೆ

(ಸಿ) ಆಕಾಶ, ಒಮ್ಮೆ, ದಿನ, ದಿನಾಲು, ರೈತ, ಹದ್ದಿನ (ಡಿ) ಆಕಾಶ, ಒಮ್ಮೆ, ರೈತ, ದಿನಾಲು, ಹದ್ದಿನ, ದಿನ

**ಉತ್ತರ :** (ಸಿ) ಆಕಾಶ, ಒಮ್ಮೆ, ದಿನ, ದಿನಾಲು, ರೈತ, ಹದ್ದಿನ

**II. ಈ ಕೆಳಗಿನ ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಹೊಂದುವ ಸಂಬಂಧೀ ಪದವನ್ನು ಬರೆಯಿರಿ.** **4*1=4**

7. ಅತಿ ಆಸೆ : ಗತಿ ಕೇಡು : : ಹೊಟ್ಟೆಗೆ ಹಿಟ್ಟಿಲ್ಲ : **ಜುಟ್ಟಿಗೆ ಮಲ್ಲಿಗೆ**

8. ರಜ : ದೂಳು : : ಹುಸಿ : **ಸುಳ್ಳು**

9. ಹಗ್ಗ ಹಾಸಿದೆ ಕೋಣ ಮಲಗಿದೆ : ಕುಂಬಳಕಾಯಿ : : ಬಿಳಿ ಕುದುರೆಗೆ ಹಸಿರು ಬಾಲ : **ಮೂಲಂಗಿ**

10. ಆಕಾಶ : ಗಗನ, ಬಾನು : : ಸೂರ್ಯ : **ರವಿ, ಭಾಸ್ಕರ**

**III. ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ** **1*7=7**

11. ಅರೋಗ್ಯ, ಪ್ಲಾಸ್ಟಿಕ್, ಉಳಿಸಿ, ತ್ಯಜಿಸಿ, ಕಾಡು, ರಕ್ಷಿಸಿ, ನಾಡು, ಜೀವ – ಈ ಪದಗಳನ್ನು ಬಳಸಿಕೊಂಡು ಎರಡು ಘೋಷವಾಕ್ಯ ರಚಿಸಿ.

**ಉತ್ತರ :** ಕಾಡು ರಕ್ಷಿಸಿ ನಾಡು ಉಳಿಸಿ, ಪ್ಲಾಸ್ಟಿಕ್ ತ್ಯಜಿಸಿ ಜೀವ ಉಳಿಸಿ.

12. ಪ್ಲಾಸ್ಟಿಕೋಪಾಖ್ಯಾನ ನಾಟಕದಲ್ಲಿ ಬರುವ ಪ್ಲಾಸ್ಟಿಕಾಸುರನ ತಂದೆಯ ಹೆಸರೇನು?

**ಉತ್ತರ :** ಪ್ಲಾಸ್ಟಿಕೋಪಾಖ್ಯಾನ ನಾಟಕದಲ್ಲಿ ಬರುವ ಪ್ಲಾಸ್ಟಿಕಾಸುರನ ತಂದೆಯ ಹೆಸರು ವಿಜ್ಞಾನೇಶ್ವರ

13. ಬಳೆಗಾರನಿಗೆ, ಮುತ್ತೈದೆ ತನ್ನ ತಾಯಿಗೆ ಎಂತಹ ಬಳೆಗಳನ್ನು ಕೊಂಡ್ಹೋಗು ಎಂದು ಹೇಳುತ್ತಾಳೆ?

**ಉತ್ತರ :** ಬಳೆಗಾರನಿಗೆ, ಮುತ್ತೈದೆ ತನ್ನ ತಾಯಿಗೆ ಅಚ್ಚ ಕೆಂಪಿನ ಬಳೆ, ಹಸಿರು ಗೀರಿನ ಬಳೆಗಳನ್ನು ಕೊಂಡ್ಹೋಗು ಎಂದು ಹೇಳುತ್ತಾಳೆ.

14. ಅಲ್ಲಮ ಪ್ರಭುವಿನ ವಚನದಲ್ಲಿ ಹೇಳಿದಂತೆ ಕೃತಯುಗದಲ್ಲಿ ಶ್ರೀಗುರು ಶಿಷ್ಯಂಗೆ ಹೇಗೆ ಬುದ್ಧಿ ಕಲಿಸಿದರು?

**ಉತ್ತರ :** ಅಲ್ಲಮ ಪ್ರಭುವಿನ ವಚನದಲ್ಲಿ ಹೇಳಿದಂತೆ ಕೃತಯುಗದಲ್ಲಿ ಶ್ರೀಗುರು ಶಿಷ್ಯಂಗೆ ಬಡಿದು ಬುದ್ಧಿ ಕಲಿಸಿದರು.

15. ನಿಮಗೆ ಗೊತ್ತಿರುವ ಯಾವುದಾದರು ಎರಡು ಜನಪದ ಕಲೆಗಳ ಹೆಸರನ್ನು ಬರೆಯಿರಿ?

**ಉತ್ತರ :** ಯಕ್ಷಗಾನ, ಡೊಳ್ಳು ಕುಣಿತ (ಇತರೆ ಕಲೆಗಳ ಹೆಸರನ್ನು ಹೆಸರಿಸಬಹುದು)

16. ನಿಮ್ಮ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಆಚರಿಸುವ ಯಾವುದಾದರೂ ಎರಡು ಹಬ್ಬ/ಜಾತ್ರೆಗಳನ್ನು ಹೆಸರಿಸಿ?

**ಉತ್ತರ :** ದಸರಾ ಹಬ್ಬ, ಕೊಟ್ಟೂರೇಶ್ವರ ರಥೋತ್ಸವ (ಇತರೆ ಬೇರೆ ಹಬ್ಬಗಳ ಹೆಸರನ್ನು ಹೆಸರಿಸಬಹುದು)

17. ಪಾಠ ಕಲಿಸಿದ ಮೃಗರಾಜ ಕಥೆಯಲ್ಲಿ ನರಿಗೆ ಹೆಚ್ಚು ಉಪಟಳವನ್ನು ನೀಡಿದವರು ಯಾರು?

**ಉತ್ತರ :** ಪಾಠ ಕಲಿಸಿದ ಮೃಗರಾಜ ಕಥೆಯಲ್ಲಿ ನರಿಗೆ ಹೆಚ್ಚು ಉಪಟಳವನ್ನು ನೀಡಿದವರು ಒಂಟೆ.

**IV. ಈ ಕೆಳಗಿನವುಗಳಿಗೆ ಮೂರು – ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ** **10*2=20**

**18. ಜಲಸಂರಕ್ಷಣೆಯ ವಿಧಾನಗಳಾವುವು ?**

**ಉತ್ತರ :** 1. ನೀರನ್ನು ಮಿತವಾಗಿ ಬಳಸುವುದು. 2. ತೋಟಗಳು, ಸಸ್ಯಗಳು, ಗಿಡಮರಗಳಿಗೆ ತುಂತುರು ನೀರಾವರಿ ಅಳವಡಿಸುವುದು ಮತ್ತು ಬಳಸಿದ ನೀರನ್ನು ಮರುಬಳಕೆಗೆ ಉಪಯೋಗಿಸುವುದು. 3. ಗೃಹಬಳಕೆಗೆ ಅಂದರೆ ಬಟ್ಟೆ ತೊಳೆಯಲು, ವಾಹನಗಳು ಮತ್ತು ಧನಗಳನ್ನು ತೊಳೆಯಲು ಮಿತವಾಗಿ ನೀರನ್ನು ಬಳಸುವುದು. 4. ಛಾವಣಿ ನೀರಿನ ಮಳೆಕೊಯ್ಲು ಮಾಡಿ ನೀರನ್ನು ಸಂಗ್ರಹಿಸುವುದು, ಕೊಳವೆ ಬಾವಿಗಳು ಮತ್ತು ತೆರೆದ ಬಾವಿಗಳಿಗೆ ನೀರು ಮರುಪೂರಣ ಮಾಡುವುದು.

**19. ಸಖಿ ಯೋಜನೆಯನ್ನು ಜಾರಿಗೆ ತಂದ ಉದ್ದೇಶವೇನು?**

**ಉತ್ತರ :** ಮಹಿಳೆಯರ ಮತ್ತು ಮಕ್ಕಳ ಮೇಲಿನ ದೌರ್ಜನ್ಯ, ಅತ್ಯಾಚಾರ, ಬಾಲ್ಯ ವಿವಾಹ, ಮಾನವ ಕಳ್ಳ ಸಾಗಣಿಕೆ ಹೀಗೆ ಹಲವಾರು ಸಾಮಾಜಿಕ ಪಿಡುಗಳ ವಿರುದ್ಧ ಹೋರಾಟ ನಡೆಸಲು ಹಾಗೂ ಕಿಶೋರಿಯರಿಗೆ ಶಿಕ್ಷಣ, ಆರೋಗ್ಯ, ಕಾನೂನು ಮಾಹಿತಿ ನೀಡುವುದರ ಜೊತೆಗೆ ಸ್ವಾವಲಂಬಿ ಜೀವನ ಕಂಡುಕೊಳ್ಳಲು ಬೇಕಾಗಿರುವ ತರಬೇತಿ ನೀಡುವುದರೊಂದಿಗೆ ಕಿಶೋರಿಯರ ಸಬಲೀಕರಣಕ್ಕಾಗಿ ಈ ಸಖಿ ಯೋಜನೆಯನ್ನು ಜಾರಿಗೆ ತರಲಾಗಿದೆ.

**20. ಪ್ರವಾಹದಿಂದ ಉಂಟಾಗುವ ಸಮಸ್ಯೆಗಳಾವುವು?**

**ಉತ್ತರ :** ಜನರು ಮನೆಮಠಗಳನ್ನು ಕಳೆದುಕೊಂಡು ಬೀದಿಗೆ ಬೀಳುತ್ತಾರೆ. ಜನ, ಜಾನುವಾರಗಳಿಗೆ ಕುಡಿಯಲು ನೀರು, ತಿನ್ನಲು ಆಹಾರ ಸಿಗದೆ ಪರದಾಡುವಂತಾಗುತ್ತದೆ. ಮರಗಿಡಗಳು, ರೈತರು ಬೆಳೆದ ಬೆಳೆಗಳು ನಾಶವಾಗುವುದರೊಂದಿಗೆ ಮಣ್ಣು, ಜನ, ಪ್ರಾಣಿಗಳು ಕೊಚ್ಚಿಕೊಂಡು ಹೋಗುತ್ತವೆ.

**21. ವೀರಗಾಸೆಯ ವೇಷಭೂಷಣಗಳಾವುವು ?**

**ಉತ್ತರ :** ವೀರಗಾಸೆ ಕುಣಿತದವರ ವೇಷಭೂಷಣ ವಿಶೇಷವಾಗಿರುತ್ತವೆ. ಬಿಳಿಯ ಪಂಚೆಯ ವೀರಗಚ್ಚೆ, ತಲೆಗೆ ಅರಿಶಿಣ ಅಥವಾ ನೀಲಿ ಬಣ್ಣದ ರುಮಾಲು, ಕಾವಿ ಬಣ್ಣದ ಕಸೆಯಂಗಿ, ಕೊರಳಲ್ಲಿ ರುದ್ರಾಕ್ಷಿ ಸರ, ಹಣೆಗೆ ವಿಭೂತಿ, ಕರ್ಣಕುಂಡಲ, ಸೊಂಟಪಟ್ಟಿ, ಬಿಚ್ಚುಗತ್ತಿ, ಕಾಲ್ಗೆಜ್ಜೆ ಧರಿಸುತ್ತಾರೆ.

**22. ಭಿಕ್ಷೆ ಬೇಡುವುದು ತಪ್ಪೋ? ಸರಿಯೋ ? ಯೋಚಿಸಿ ಬರೆಯಿರಿ.**

**ಉತ್ತರ :** ಭಿಕ್ಷೆ ಬೇಡುವುದು ತಪ್ಪೋ? ಸರಿಯೋ ಎಂಬುದು ಭಿಕ್ಷೆ ಬೇಡುವವರ ಮೇಲೆ ಅವಲಂಭಿತವಾಗುತ್ತದೆ. ಭಿಕ್ಷೆ ಬೇಡುವವರು ತಮ್ಮ ಜೀವನವನ್ನು ಸಾಗಿಸಿಕೊಳ್ಳಲು, ತಮ್ಮ ಕೆಲಸ ಕಾರ್ಯಗಳನ್ನು ಮಾಡಿಕೊಳ್ಳಲು ಸಾಧ್ಯವಿರುವುದಿಲ್ಲವೋ ಅಂತವವರು ಭಿಕ್ಷೆ ಬೇಡುವುದರಲ್ಲಿ ತಪ್ಪಿಲ್ಲ. ಆದರೆ ಕೈಕಾಲುಗಳು ಸರಿಯಿದ್ದು ಕೆಲಸ ಮಾಡಿಕೊಂಡು ಜೀವನ ಸಾಗಿಸಲು ಸಮರ್ಥರಿದ್ದು ಅಂತವರು ಭಿಕ್ಷೆ ಬೇಡುವುದು ತಪ್ಪು. (ಇತರೆ ಅಭಿಪ್ರಾಯಗಳನ್ನು ಬರೆಯಬಹುದು)

**23. ಸೈಬರ್ ಅಪರಾಧವೆಂದರೇನು ? ಉದಾಹರಣೆ ಕೊಡಿ.**

**ಉತ್ತರ :** ಎಲ್ಲೋ ಒಂದು ಮೂಲೆಯಲ್ಲಿ ಕುಳಿತು ಕಂಪ್ಯೂಟರ್, ಲ್ಯಾಪ್‌ಟಾಪ್ ಅಥವಾ ಮೊಬೈಲ್ ಮೂಲಕ ಇಂಟರ್‌ನೆಟ್ ಬಳಸಿ ಮಾಡುವ ಅಪರಾಧವೇ ಸೈಬರ್ ಅಪರಾಧವಾಗಿದೆ.

ಉದಾ : ಕೋವಿಡ್–19' ಸಂಬಂಧ ಕೇಂದ್ರ ಸರ್ಕಾರದಿಂದ ನಿಮ್ಮ ಬ್ಯಾಂಕ್ ಖಾತೆಗೆ ಹಣವನ್ನು ಹಾಕುತ್ತೇವೆ ಎಂದು ಪರಿಚಯ ಮಾಡಿಕೊಂಡು ಅವರ ಎಟಿಎಂ ಕಾರ್ಡ್ ನಂಬರ್ ಹಾಗೂ ಒಟಿಪಿಯನ್ನು ಪಡೆದುಕೊಂಡು ಅವರ ಬ್ಯಾಂಕ್ ಖಾತೆಯಿಂದ ಹಣವನ್ನು ದೋಚುತ್ತಿದ್ದಾರೆ. ಫಾರಿನ್ ಮನಿ ಎಕ್ಸ್‌ಚೇಂಜ್ ಮಾಡಿಕೊಡುವುದಾಗಿ ನಕಲಿ ವೆಬ್‌ಸೈಟ್‌ನ್ನು ಸೃಜಿಸಿ, ಗ್ರಾಹಕರಿಂದ ಹಣವನ್ನು ಆನ್‌ಲೈನ್ ವರ್ಗಾವಣೆ ಮಾಡಿಸಿಕೊಂಡು ಮೋಸಮಾಡುತ್ತಿದ್ದಾರೆ.

**24. ಮೂಲಭೂತ ಹಕ್ಕುಗಳನ್ನು ಪಟ್ಟಿ ಮಾಡಿರಿ.**

**ಉತ್ತರ :** ಆರು ಮೂಲಭೂತ ಹಕ್ಕುಗಳು: 1.ಸಮಾನತೆಯ ಹಕ್ಕು 2.ಸ್ವಾತಂತ್ರ್ಯದ ಹಕ್ಕು 3.ಶೋಷಣೆಯ ವಿರುದ್ಧದ ಹಕ್ಕು 4.ಧಾರ್ಮಿಕ ಸ್ವಾತಂತ್ರ್ಯದ ಹಕ್ಕು 5.ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಹಕ್ಕು 6.ಸಾಂವಿಧಾನಿಕ ಪರಿಹಾರಗಳ ಹಕ್ಕು.

**25. ಪ್ರವಾಸಿ ಸ್ಥಳವಾದ ಜಯಪುರದ ಬಗ್ಗೆ ತಿಳಿಸಿ.**

**ಉತ್ತರ :** ಜಯಪುರ ರಾಜಸ್ತಾನದ ರಾಜಧಾನಿ. ರಜಪೂತರ ಕಾಲದಲ್ಲಿ ನಿರ್ಮಿತವಾದ ಅರಮನೆ, ಜಂತರ್ ಮಂತರ್, ಅಂಬೇರದ ಕೋಟೆ ಮುಂತಾದ ಸ್ಥಳಗಳನ್ನು ನೋಡಬಹುದು. ಅಂಬೇರ ಜಯಪುರದ ಪೂರ್ವಕಾಲದ ರಾಜಧಾನಿ. ಹಳೆಯ ಕೋಟೆ, ಅರಮನೆಗಳೆಲ್ಲ ಅಲ್ಲಿವೆ. ಅರಮನೆಯಲ್ಲಿ ಚಂದ್ರಕಾಂತ ಶಿಲೆಯ ಸುಂದರ ಮಂಟಪಗಳಿವೆ. ಶಿಲೆಯನ್ನು ಕೆತ್ತಿ ಬಣ್ಣದ ಕಲ್ಲುಗಳಿಂದ ಕೊರೆದು ತುಂಬಿಸಿದ ಲತಾಪುಷ್ಪಗಳ ಚಿತ್ರಾವಳಿಗಳೂ ಇವೆ. ಹಾಲುಗಲ್ಲಿನ ಚಾವಡಿ ಮತ್ತು ನೀರಿನ ಕಾರಂಜಿಗಳಿವೆ; ಚಿತ್ರ ಕೊರೆದು ಮಾಡಿದ ಹಾಲುಗಲ್ಲಿನ ನೀರಕಾಲುವೆಗಳಿವೆ. ಇವೆಲ್ಲ ರಜಪೂತ ಅರಸರುಗಳ ರಸಿಕ ಜೀವನದ ದ್ಯೋತಕಗಳು. ಅಲ್ಲಿರುವ 'ಜಂತ್ರ ಮಂತ್ರ' ಹಳೆಯ ಕಾಲದ ಖಗೋಳವಿಜ್ಞಾನದ ಪರಿಶೀಲನಾಲಯ. 400–500 ವರ್ಷಗಳ ಪೂರ್ವದಲ್ಲಿ, ಖಗೋಳಶಾಸ್ತ್ರಜ್ಞರು ಗ್ರಹ, ಸೂರ್ಯ ಚಂದ್ರ, ತಾರಾಮಂಡಲಗಳನ್ನು ಅಳೆದು, ಪರಿಶೀಲಿಸಿ ನೋಡುವ ಸಲುವಾಗಿ, ಇಲ್ಲಿ ವಿಚಿತ್ರವಾದ ಸಾಧನಗಳನ್ನು ನೆಟ್ಟಿದ್ದಾರೆ.

**26. ನಿಮ್ಮ ಒಂದು ದಿನದ ದಿನಚರಿಯನ್ನು ಬರೆಯಿರಿ.**

**ಉತ್ತರ : (ವಿದ್ಯಾರ್ಥಿಗಳ ವೈಯುಕ್ತಿಕ ಬರೆಹ)**

**27. ಸತ್ಯಾನಂದ ಪಾತ್ರೋಟರ 'ಗಿಡಮರ' ಪದ್ಯದಲ್ಲಿನ ಮರದ ಒಳ್ಳೆಯ ಗುಣಗಳನ್ನು ಪಟ್ಟಿ ಮಾಡಿರಿ.**

**ಉತ್ತರ :** ಯಾರೇ ಬಂದು ಏನೇ ಮಾಡಲಿ ಮರಗಳು ಎಲ್ಲದಕ್ಕೂ ದಿವ್ಯ ಮೌನ ವಹಿಸುತ್ತವೆ. ಅವುಗಳ ರೆಂಬೆ ಕೊಂಬೆ ಚಿಗುರುವಲ್ಲಿ ಕಡಲುಕ್ಕುವ ಚೇತನ. ಜಾತಿ–ಗೀತಿ, ಲಿಂಗ–ಧರ್ಮ ಮೀರಿ ಬೆಳೆದಿವೆ. ಅವನು ಇವಳು ಅದು ಇದು ಎಂದು ಒಂದು ದಿನವೂ ಎಣಿಸುತ್ತಿಲ್ಲ. ಇವು ಸತ್ಯಾನಂದ ಪಾತ್ರೋಟರ 'ಗಿಡಮರ' ಪದ್ಯದಲ್ಲಿನ ಮರದ ಒಳ್ಳೆಯ ಗುಣಗಳು.

**V. ಈ ಸಾಹಿತಿ/ಕವಿಗಳ ಸ್ಥಳ, ಕಾಲ, ಕೃತಿ, ಪ್ರಶಸ್ತಿ/ಬಿರುದುಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ. 2*3=6**

**28. ರಾಘವಾಂಕ**

**ಉತ್ತರ :** ನಡುಗನ್ನಡದ ಅಗ್ರಮಾನ್ಯ ಕವಿಗಳಲ್ಲಿ ಒಬ್ಬನಾದ ರಾಘವಾಂಕ ಸಾ.ಶ.ಸುಮಾರು 1225 ಹಂಪಿ ಕ್ಷೇತ್ರದಲ್ಲಿ ಜನಿಸಿದ್ದಾನೆ. ಪಂಪಾಪತಿ ವಿರೂಪಾಕ್ಷನ ಪರಮಭಕ್ತ. ರಗಳೆ ಕವಿಯೆಂದೆನಿಸಿದ ಹರಿಹರನ ಸೋದರಳಿಯ ಮತ್ತು ಶಿಷ್ಯ. ವಿರೂಪಾಕ್ಷನ ಪರಮಭಕ್ತ. ಹರಿಶ್ಚಂದ್ರಕಾವ್ಯ, ಸಿದ್ಧರಾಮಚಾರಿತ್ರ, ವೀರೇಶ್ವರಚರಿತೆ, ಸೋಮನಾಥಚರಿತೆ, ಶರಭಚಾರಿತ್ರ, ಹರಿಹರ ಮಹತ್ವ ಮುಂತಾದ ಕಾವ್ಯಗಳನ್ನು ಷಟ್ಪದಿ ಛಂದಸ್ಸುಗಳಲ್ಲಿ ರಚಿಸಿದ್ದಾನೆ. ಉಭಯಕವಿ ಕಮಲ ರವಿ, ಕವಿ ಶರಭ ಭೇರುಂಡ, ಷಟ್ಪದಿ ಬ್ರಹ್ಮ ಅಭಿದಾನಗಳನ್ನು ಹೊಂದಿದ್ದು ಷಟ್ಪದಿ ಕಾವ್ಯದ ನಿರ್ಮಾಪಕನೆಂಬ ಅಗ್ಗಳಿಕೆಗೆ ಪಾತ್ರನಾದ ಕವಿ.

**29. ಬಸವಣ್ಣ**

**ಉತ್ತರ :** ಬಸವಣ್ಣನವರು ಕ್ರಿ.ಶ.1134ರಲ್ಲಿ ಈಗಿನ ಬಿಜಾಪುರ ಜಿಲ್ಲೆಯಲ್ಲಿರುವ ಬಸವನ ಬಾಗೇವಾಡಿ ಗ್ರಾಮದಲ್ಲಿ ಜನಿಸಿದರು. ತಂದೆ ಮಾದರಸ ಮತ್ತು ತಾಯಿ ಮಾದಲಾಂಬಿಕೆ. ಬಸವಣ್ಣನವರು ಕಲಚುರಿ ರಾಜ ಬಿಜ್ಜಳನಲ್ಲಿ ಮಂತ್ರಿಯಾಗಿದ್ದವರು. ಇವರು ಸಾವಿರಾರು ವಚನಗಳನ್ನು ರಚಿಸಿದ್ದಾರೆ. ಅವರ ವಚನಗಳ ಅಂಕಿತ ಕೂಡಲಸಂಗಮದೇವ. ವಚನಗಳ ಮೂಲಕ ಸಮಾಜವನ್ನು ಸುಧಾರಿಸಲು ಪ್ರಯತ್ನಿಸಿದವರು. ಅನುಭವ ಮಂಟಪದ ಮೂಲಕ ಸಮಾನತೆಯನ್ನು ತರಲು ಪ್ರಯತ್ನಿಸಿದ ಮಹಾನುಭಾವರಾಗಿದ್ದಾರೆ.

**VI. ಈ ಕೆಳಗಿನ ಸರಣಿ ಚಿತ್ರವನ್ನು ವೀಕ್ಷಿಸಿ ಕಥೆಯೊಂದನ್ನು ಬರೆಯಿರಿ 1*3=3**

**30.**



ಶ್ರವಣಕುಮಾರ ಎಂಬ ಮುನಿಪುತ್ರನಿದ್ದ. ಅವನ ತಂದೆ ತಾಯಿ ಇಬ್ಬರೂ ಹುಟ್ಟು ಕುರುಡರು ಹಾಗೂ ವಯೋವೃದ್ಧರು. ಒಮ್ಮೆ ಅವನ ತಂದೆತಾಯಿಗಳಿಗೆ ಕಾವಡಿಯಲ್ಲಿ ಕೂರಿಸಿಕೊಂಡು ತೀರ್ಥಯಾತ್ರೆ ಮಾಡಿಸಿದನು. ಹೀಗೆಯೇ ಸುತ್ತಾಡುತ್ತಿರುವಾಗ ಒಂದು ಮಧ್ಯಾಹ್ನ ದಣಿವಾರಿಸಿಕೊಳ್ಳಲು ಕಾಡಿನಲ್ಲಿ ಒಂದು ಮರದಡಿ ಕಾವಡಿ ಇಳಿಸಿದ. ವೃದ್ಧ ತಂದೆತಾಯಿಗಳು ಬಹಳ ಬಾಯಾರಿಕೆಯೆಂದೂ, ನೀರು ಬೇಕೆಂದರು. ಶ್ರವಣಕುಮಾರ ಅವರನ್ನು ಅಲ್ಲಿಯೇ ನೆರಳಲ್ಲಿ ಕೂಡಿಸಿ ತಾನು ನೀರನ್ನರಸಿ ಹೊರಟ. ಸ್ವಲ್ಪ ದೂರ ನಡೆದಾಗ ಅಲ್ಲೊಂದು ತಿಳಿನೀರ ತೆರೆ ಕಾಣಿಸಿತು. ಅಲ್ಲಿ ತನ್ನ ತಂದೆತಾಯಿಗಳಿಗೆ ನೀರನ್ನು ತುಂಬಿಸಿಕೊಳ್ಳುತ್ತಿದ್ದ. ಅದೇ ಸಮಯಕ್ಕೆ ಅಯೋಧ್ಯೆಯ ರಾಜನಾದ ದಶರಥ ಬೇಟೆಗಾಗಿ ಕಾಡಿಗೆ ಬಂದಿದ್ದ. ಅವನಿಗೆ ಶಬ್ದ ಬಂದ ಕಡೆ ಬಾಣ ಬಿಡುವ ಕಲೆ(ಶಬ್ಧವೇಧಿ ವಿದ್ಯೆ) ಗೊತ್ತಿತ್ತು. ಶ್ರವಣಕುಮಾರ ನೀರು ತುಂಬಿಸುವಾಗ ಆದ ಗುಳುಗುಳು ಶಬ್ದ ದಶರಥನಿಗೆ ಪ್ರಾಣಿ ನೀರು ಕುಡಿಯುವಾಗ ಮಾಡುವ ಶಬ್ದದಂತೆ ಕೇಳಿಸಿತು. ಯಾವುದೋ ಪ್ರಾಣಿಯಿರಬೇಕೆಂದು ಉತ್ಸಾಹದಲ್ಲಿ ಶಬ್ದ ಬಂದ ಕಡೆ ಬಾಣ ಪ್ರಯೋಗಿಸಿದ. ಬಾಣವು ಶ್ರವಣಕುಮಾರನ ಎದೆಯನ್ನು ಹೊಕ್ಕಿತು. ಅಯ್ಯೋ ಎಂದು ಕೂಗಿದ ಮುನಿಪುತ್ರನ ಧ್ವನಿ ಕೇಳಿ ದಶರಥ ಅವಾಕ್ಕಾಗಿ ಕೂಗು ಕೇಳಿಬಂದ ಕಡೆ ಧಾವಿಸಿದ. ಮುನಿಕುಮಾರ ನೆಲದಲ್ಲಿ ಬಿದ್ದು ವಿಲವಿಲ ಒದ್ದಾಡುತ್ತಿದ್ದ. ಅವನನ್ನು ತನ್ನ ತೊಡೆಯ ಮೇಲೆ ಮಲಗಿಸಿಕೊಂಡ ದಶರಥ, ಅವನ ಪೂರ್ವೋತ್ತರಗಳನ್ನು ವಿಚಾರಿಸಿ ತಿಳಿದುಕೊಂಡ. ರಾಜನಿಗೆ ಪಶ್ಚಾತ್ತಾಪವಾಗಿತ್ತು. ಸಾಯುವ ಸ್ಥಿತಿಯಲ್ಲಿದ್ದ ಶ್ರವಣಕುಮಾರ ತನ್ನ ತಂದೆತಾಯಿಗಳ ಗತಿಯೇನೆಂದು ದುಃಖಿಸಿದ. ಅವನಿಗೆ ಸಮಾಧಾನ ಹೇಳಿದ ರಾಜ ಆ ವೃದ್ಧ ತಪಸ್ವಿಗಳನ್ನು ತಾನೇ ಪೋಷಿಸುವುದಾಗಿ ಮುನಿಪುತ್ರನಿಗೆ ಮಾತು ಕೊಟ್ಟ. ಶ್ರವಣಕುಮಾರ ನಿಶ್ಚಿಂತೆಯಿಂದ ಪ್ರಾಣಬಿಟ್ಟ.

ಇತ್ತ ಮಗ ಇನ್ನೂ ಏಕೆ ಬರಲಿಲ್ಲವೆಂದು ಕಾಯುತ್ತಿದ್ದ ವೃದ್ಧರ ಬಳಿ ದಶರಥ ತಾನೇ ನೀರನ್ನು ತೆಗೆದುಕೊಂಡು ಬಂದ. ಕಣ್ಣು ಕಾಣದ ವೃದ್ಧರು ರಾಜನನ್ನೇ ಮಗನೆಂದು ತಿಳಿದು ಮಗನೇ "ಏಕೆ ತಡಮಾಡಿದೆ? ನಿನಗೇನಾದರೂ ಅಪಾಯವಾಯಿತೇನೋ ಎಂದು ಭಯವಾಯಿತು' ಎಂದರು. ದಶರಥನಿಗೆ ತಡೆಯಲಾಗಲಿಲ್ಲ. ಅವನು ದುಃಖಿಸುತ್ತಾ ನಡೆದ ಸಂಗತಿಯನ್ನು ತಿಳಿಸಿದ. ಮಗನ ಸಾವಿನಿಂದ ಕಂಗಾಲಾದ ವೃದ್ಧರಿಗೆ ಎದೆಯೊಡೆದಂತಾಯ್ತು. ನೆಲದಲ್ಲಿ ಬಿದ್ದು ಗೋಳಾಡುತ್ತಾ ಕೋಪದಿಂದ ರಾಜನಿಗೆ "ನಮ್ಮ ವೃದ್ಧಾಪ್ಯದಲ್ಲಿ ಆಸರೆಯಾಗಿದ್ದ ಮಗನನ್ನು ಕೊಂದೆಯಲ್ಲವೇ ನೀನು?!

ನಿನ್ನ ವೃದ್ಧಾಪ್ಯದಲ್ಲೂ ಮಕ್ಕಳಿಂದ ದೂರವಾಗಿ ಸಾಯುವಂತಾಗಲಿ' ಎಂದು ಶಾಪವಿತ್ತು ದುಃಖ ತಡೆಯಲಾರದೆ ಸತ್ತುಹೋದರು.

**VII. ಈ ಕೆಳಗಿನ ಸರಣಿ ಚಿತ್ರವನ್ನು ವೀಕ್ಷಿಸಿ ಲೇಖನವೊಂದನ್ನು ಸಿದ್ದಪಡಿಸಿ.** **1*3=3**

**31.**



**ಉತ್ತರ :** ರಾಜು ಎಂಬ ಶಿಕ್ಷಕರೊಬ್ಬರು ಹಳ್ಳಿಯ ಶಾಲೆಗೆ ಹೋಗುವಾಗ ದಾರಿಯ ಮಧ್ಯದಲ್ಲಿ ದೇವಸ್ಥಾನವೊಂದನ್ನು ನೋಡುತ್ತಾರೆ. ಆ ದೇವಾಲಯದಲ್ಲಿದ್ದ ಶಿವಲಿಂಗಕ್ಕೆ ಕೈ ಮುಗಿದು ಮುಂದೆ ಹೋಗಬೇಕೆಂದು ಹತ್ತಿರ ಬಂದಾಗ ಅಲ್ಲಿ ತುಂಬಾ ಕಸ ತುಂಬಿಕೊಂಡು ಗಲೀಜು ಆಗಿರುತ್ತದೆ. ಇದನ್ನು ಹೇಗಾದರೂ ಮಾಡಿ ಸ್ವಚ್ಚ ಮಾಡಬೇಕೆಂದು ಯೋಚಿಸಿ ಅದಕ್ಕೆ ಒಂದು ಉಪಾಯವನ್ನು ಮಾಡುತ್ತಾರೆ. ತರಗತಿಗೆ ಬಂದ ಶಿಕ್ಷಕರು ವಿದ್ಯಾರ್ಥಿಗಳಿಗೆ ಸ್ವಚ್ಚತೆಯ ಬಗ್ಗೆ ಅರಿವು ಮೂಡಿಸಲು ಪಾಠ ಮಾಡುತ್ತಾರೆ. ಕೊನೆಯಲ್ಲಿ ವಿದ್ಯಾರ್ಥಿಗಳೇ ಇದರ ಪ್ರಾಯೋಗಿಕತೆಗೆ ನಾವೊಂದು ಸ್ಥಳವನ್ನು ಸ್ವಚ್ಚ ಮಾಡೋಣ ಎಂದು ಬುಟ್ಟಿ, ಪರಕೆಗಳನ್ನು ತೆಗೆದುಕೊಂದು, ವಿದ್ಯಾರ್ಥಿಗಳನ್ನು ದೇವಸ್ಥಾನದ ಬಳಿ ಕರೆದುಕೊಂಡು ಬರುತ್ತಾರೆ. ಕಸದಿಂದ ಕೂಡಿದ ಆ ದೇವಸ್ಥಾನದ ಅಂಗಳವನ್ನು ತೋರಿಸುತ್ತಾರೆ. ವಿದ್ಯಾರ್ಥಿಗಳು ಇದನ್ನು ನೋಡಿ ನಾವು ಶ್ರಮದಾನ ಮಾಡಿ ಸ್ವಚ್ಚಗೊಳಿಸಬೇಕೆಂದು ತೀರ್ಮಾನಿಸಿ, ಬೇಗ ಬೇಗನೆ ಆ ದೇವಸ್ಥಾನದ ಅಂಗಳವನ್ನು ಸ್ವಚ್ಚ ಮಾಡಿದರು. ನಂತರ ವಿದ್ಯಾರ್ಥಿಗಳನ್ನು ಹಿಂತಿರುಗಿ ಶಾಲೆಗೆ ಕರೆದುಕೊಂಡು ಬಂದರು. ಮತ್ತೆ ತರಗತಿಯಲ್ಲಿ ವಿದ್ಯಾರ್ಥಿಗಳನ್ನು ಕೂರಿಸಿಕೊಂಡು ಶ್ರಮದಾನದ ಮಹತ್ವವನ್ನು ಮತ್ತೊಷ್ಟು ವಿವರಿಸಿದರು. ಹೀಗೆ ನಮ್ಮ ಶಾಲೆ, ಮನೆಗಳನ್ನು ಸ್ವಚ್ಚವಾಗಿಟ್ಟುಕೊಳ್ಳಬೇಕೆಂದು ಹೇಳುತ್ತ ತರಗತಿಯನ್ನು ಮುಗಿಸಿದರು.

(ವಿದ್ಯಾರ್ಥಿಗಳು ಬೇರೆ ರೀತಿಯಲ್ಲಿಯೂ ಬರೆಯಬಹುದು)

**VIII. ಈ ಕೆಳಗೆ ಕೊಟ್ಟಿರುವ ಗಾದೆಗಳಲ್ಲಿ ಯಾವುದಾದರೂ ಒಂದನ್ನು ವಿಸ್ತರಿಸಿ ಬರೆಯಿರಿ.** **1*3=3**

**32. ಕೋಟಿ ವಿದ್ಯೆಗಿಂತ, ಮೇಟಿ ವಿದ್ಯೆ ಮೇಲು**

**ಉತ್ತರ :** ಗಾದೆ ವೇದಗಳಿಗೆ ಸಮಾನ, ಗಾದೆ ಹಿರಿಯರು ಮತ್ತು ಜನಪದರ ಜೀವನದ ಅನುಭವದ ನುಡಿಮುತ್ತುಗಳು. ಗಾದೆಗಳು ಆಕಾರದಲ್ಲಿ ವಾಮನನಾದರೂ ಅರ್ಥದಲ್ಲಿ ತ್ರಿವಿಕ್ರಮನಂತೆ. ಗಾದೆಗಳು ಜೀವನದನುಭವಕ್ಕೆ ಹಿಡಿದ ಕನ್ನಡಿಯಾಗಿವೆ. ಆದುದರಿಂದ ಗಾದೆಗಳು ಸತ್ಯಕ್ಕೆ ಬಹಳ ಹತ್ತಿರವಾಗಿವೆ. **"ಕೋಟಿ ವಿದ್ಯೆಗಿಂತ, ಮೇಟಿ ವಿದ್ಯೆ ಮೇಲು"** ಎಂಬ ಈ ಮೇಲಿನ ಗಾದೆಯು ಪ್ರಸಿದ್ಧವಾಗಿದೆ. ಈ ಗಾದೆಯು ಬೇಸಾಯ/ಕೃಷಿಯ ಮಹತ್ತ್ವವನ್ನು ಅರ್ಥೈಸುತ್ತದೆ.

ಈ ಪ್ರಪಂಪದಲ್ಲಿ ಜನರು ಮಾಡುತ್ತಿರುವ ನೂರಾರು ವಿದ್ಯೆಗಳಲ್ಲಿ ಮೇಟಿ ವಿದ್ಯೆಯೂ ಒಂದು. ರೈತರು ಕಣದಲ್ಲಿ ಹುಲ್ಲು ತುಳಿಸಲು ಮಧ್ಯದಲ್ಲಿ ಮೇಟಿಯನ್ನು ನೆಟ್ಟಿರುತ್ತಾರೆ. ಅದಕ್ಕೆ ದನಗಳನ್ನು ಕಟ್ಟಿ, ತಿರುಗಿಸಿ ಕಾಳುಗಳನ್ನು ಬೇರ್ಪಡಿಸುತ್ತಾರೆ. ಆದ್ದರಿಂದ ಮೇಟಿ ವಿದ್ಯೆ ಎಂದರೆ ಬೇಸಾಯ ಎಂದು ಅರ್ಥೈಸಿಕೊಳ್ಳುವುದು. ಇದು ಮನುಷ್ಯನ ಜೀವನಾಧಾರವಾದ ಕಸುಬಾಗಿದೆ. ಪ್ರಪಂಚದಲ್ಲಿ ಎಷ್ಟೋ ವಿದ್ಯೆಗಳಿವೆ. ಹೊಟ್ಟೆ ತುಂಬಿಸಿಕೊಳ್ಳಲು ಜನರು ನಾನಾ ವಿದ್ಯೆಗಳನ್ನು ಕಲಿತು ಜೀವನೋಪಾಯಗಳನ್ನು ಕಂಡುಕೊಳ್ಳುತ್ತಾರೆ. ಆದರೆ ಆ ಹೊಟ್ಟೆ ತುಂಬಿಸಿಕೊಳ್ಳಲು ಆಹಾರ ಮುಖ್ಯವಾಗುತ್ತದೆ. ಇಂತಹ ಆಹಾರವನ್ನು ಒದಗಿಸುವ ಮೂಲ ಬೇಸಾಯ, ಅಂದರೆ ಮೇಟಿ ವಿದ್ಯೆ. ಮೇಟಿ ಕೆಲಸವನ್ನು ಮಾಡುವವನು ರೈತ. ಆದ್ದರಿಂದ ರೈತ ಕಲಿತಿರುವ ಈ ಮೇಟಿ ವಿದ್ಯೆ ದೇಶದ ಪ್ರಗತಿಗೆ ಬೆನ್ನಲುಬು. ಅದಕ್ಕೆ ಸರ್ವಜ್ಞ ಕವಿಯು " ಕೋಟಿ ವಿದ್ಯೆಗಳಲ್ಲಿ । ಮೇಟಿ ವಿದ್ಯೆಯೇ ಮೇಲು । ಮೇಟಿಯಿಂ ರಾಟಿ ನಡೆದುದಲ್ಲದೆ ದೇಶ । ದಾಟವೇ ಕೆಡಕು । ಸರ್ವಜ್ಞ ॥ ಎಂದಿದ್ದಾನೆ. ಎಷ್ಟು ವಿದ್ಯೆಗಳಿದ್ದರೇನು ಹೊಟ್ಟೆಯನ್ನು ಹೊರೆಯದಿದ್ದರೆ! ಅದಕ್ಕೆ

ಬೇಕು ನಮಗೆ ಮೇಟಿ ವಿದ್ಯೆ. ಅದುವೇ ನಮಗೆ ಶ್ರೇಷ್ಠವಾದುದು. ದೇಶದ ಪ್ರಗತಿಗೆ ಇದುವೇ ಮುಖ್ಯ. ಆಹಾರ ಇದ್ದರೆ ಮಾತ್ರ.

**ಅಥವಾ**

**ಉಪ್ಪು ತಿಂದವನು ನೀರು ಕುಡಿಯಲೇ ಬೇಕು.**

**ಉತ್ತರ :** ಗಾದೆ ವೇದಗಳಿಗೆ ಸಮಾನ, ಗಾದೆ ಹಿರಿಯರು ಮತ್ತು ಜನಪದರ ಜೀವನದ ಅನುಭವದ ನುಡಿಮುತ್ತುಗಳು. ಗಾದೆಗಳು ಆಕಾರದಲ್ಲಿ ವಾಮನನಾದರೂ ಅರ್ಥದಲ್ಲಿ ತ್ರಿವಿಕ್ರಮನಂತೆ. ಗಾದೆಗಳು ಜೀವನದನುಭವಕ್ಕೆ ಹಿಡಿದ ಕನ್ನಡಿಯಾಗಿವೆ. ಆದುದರಿಂದ ಗಾದೆಗಳು ಸತ್ಯಕ್ಕೆ ಬಹಳ ಹತ್ತಿರವಾಗಿವೆ. **"ಉಪ್ಪು ತಿಂದವನು ನೀರು ಕುಡಿಯಲೇ ಬೇಕು"** ಎಂಬ ಈ ಮೇಲಿನ ಗಾದೆಯು ಪ್ರಸಿದ್ಧವಾಗಿದೆ.

ಈ ಗಾದೆಯು ಮಾಡಿದ ತಪ್ಪಿಗೆ ಶಿಕ್ಷೆ ಅನಯಭವಿಸಲೇ ಬೇಕು ಎಂಬ ಅರ್ಥವನ್ನು ತಿಳಿಸುತ್ತದೆ. ಮಾಡಿದ್ದುಣ್ಣೋ ಮಹಾರಾಯ ಎನ್ನುವ ಗಾದೆಯಂತೆ ನಮ್ಮ ಜೀವನದಲ್ಲಿ ಏನು ಮಾಡುತ್ತಾನೆ ಅದೆ ನಮ್ಮ ಜೀವನದಲ್ಲಿ ಆಗುತ್ತದೆ. ಒಳ್ಳೆಯದನ್ನು ಬಯಸಿದರೆ ಒಳ್ಳೆಯದು, ಕೆಟ್ಟದ್ದನ್ನು ಮಾಡಿದರೆ ಕೆಟ್ಟದ್ದು. ವ್ಯಕ್ತಿ ತಾನು ಮಾಡಿದ ಕರ್ಮಗಳ ಫಲವನ್ನು ತಾನೇ ಅನುಭವಿಸಬೇಕು. ಬೇರೆ ಯಾರೂ ಅದರ ಫಲಗಳನ್ನು ಅನುಭವಿಸಲಾರರು ಎಂಬುದನ್ನು ಹೇಳುತ್ತದೆ. ಒಳ್ಳೆಯ ಕರ್ಮಗಳನ್ನು ಮಾಡಿದವರಿಗೆ ಒಳ್ಳೆಯ ಫಲಗಳು, ಕೆಟ್ಟ ಕರ್ಮಗಳನ್ನು ಮಾಡಿದವರಿಗೆ ಕೆಟ್ಟ ಫಲಗಳು ಉಂಟಾಗುವುದು ಖಚಿತ ಎಂಬುದನ್ನು ಇಲ್ಲಿ ಕಾಣಬಹುದಾಗಿದೆ. ಆದ್ದರಿಂದ ನಾವು ಯಾವುದೇ ಕೆಲಸ ಮಾಡಬೇಕಾದರೂ ಅದರಿಂದಾಗುವ ಪರಿಣಾಮವೇನೆಂದು ಯೋಚನೆ ಮಾಡಬೇಕು. ಕೃತ್ಯ ಮಾಡಿದ ಮೇಲೆ ಪಶ್ಚಾತ್ತಾಪ ಪಟ್ಟರೆ ಏನೂ ಪ್ರಯೋಜನವಿಲ್ಲ. ತಾನು ಮಾಡಿದ ಕರ್ಮಗಳ ಫಲವನ್ನು ತಾನು ಅನುಭವಿಸಿಯೇ ತೀರಬೇಕು. ಬೆಳೆಯ ಕಾಳನ್ನು ಬಿತ್ತಿದರೆ ಬೆಳೆ ಬೆಳೆಯುವುದಲ್ಲದೆ ಕಳೆ ಬೀಜ ಬಿತ್ತಿದರೆ ಬೆಳೆ ಬೆಳೆಯುವುದೇ? ಆದ್ದರಿಂದ ಪ್ರತಿಯೊಬ್ಬ ವ್ಯಕ್ತಿ ತನ್ನ ಸ್ವಾರ್ಥವನ್ನು ಮರೆತು ಸಮಾಜಮುಖಿಯಾಗಿ; ಎಲ್ಲರಿಗೂ ಉಪಯೋಗವಾಗುವಂತಹ ಕೆಲಸಗಳನ್ನು ಮಾಡಬೇಕು. ಅದನ್ನು ಬಿಟ್ಟು ತನ್ನ ಸ್ವಾರ್ಥಕ್ಕಾಗಿ ಕೆಟ್ಟ ಮಾರ್ಗವನ್ನು ಅನುಸರಿಸಿದರೆ ಅದರ ಪರಿಣಾಮವೂ ಕೆಟ್ಟದ್ದೇ ಆಗುತ್ತದೆ. ಇದರಿಂದ ಯಾರೂ ತಪ್ಪಿಸಿಕೊಳ್ಳಲಾರರು ಎಂಬುದನ್ನು ಈ ಗಾದೆ ಒತ್ತಿ ಹೇಳುತ್ತದೆ.

**IX. ಈ ಕೆಳಗಿನ ಹೇಳಿಕೆಗಳನ್ನು ಸ್ವಾರಸ್ಯದೊಂದಿಗೆ ಅರ್ಥೈಸಿ ಬರೆಯಿರಿ** **6*3=18**

**33. 'ಹಸಿರು ನಮ್ಮೆಲ್ಲರ ಉಸಿರು'**

**ಉತ್ತರ :** ಹಸಿರು ಜೀವಜಗತ್ತಿಗೆ ಅತಿ ಅವಶ್ಯಕವಾದದ್ದು. ಪ್ರತಿ ಜೀವರಾಶಿಗಳ ಪ್ರಾಣ. ಹಸಿರು ಇಲ್ಲದಿದ್ದರೆ ಮಳೆ, ಗಾಳಿ, ನೀರು, ನೆರಳು, ಅನ್ನ, ಅಶನಗಳಾವುವು ಇರುವುದಿಲ್ಲ. ಆದ್ದರಿಂದ ಹಸಿರು ನಮ್ಮೆಲ್ಲರ ಉಸಿರಾಗಿದೆ. ನಮ್ಮ ಸುತ್ತಮುತ್ತಲಿನ ಪ್ರಾಣಿ, ಪಕ್ಷಿಗಳು ಬದುಕಲು ಹಸಿರು ಬೇಕು. ಕಾಡು ಬೆಳಸಿ;ನಾಡು ಉಳಿಸಿ, ಕಾಡಿದ್ದರೆ ನಾವು;ನಾವಿದ್ದರೆ ಜಗತ್ತು ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು. ನಮ್ಮ ಉಸಿರು ನಿಂತಮೇಲೆ ಶವಕ್ಕೆ ಯಾವ ರೀತಿಯಾಗಿ ಬೆಲೆ ಇರುವುದಿಲ್ಲವೋ ಹಾಗೆ ಹಸಿರು ಇಲ್ಲವಾದರೆ ಈ ಜೀವರಾಶಿಗಳು ಬದುಕಲು ಸಾಧ್ಯವಿಲ್ಲ. ಆದ್ದರಿಂದ ಹಸುರನ್ನು ಉಸಿರಿನಂತೆ ಕಾಪಾಡಬೇಕು.

**ಸ್ವಾರಸ್ಯ :** ಹಸುರೆಂದರೆ ಗಾಳಿ, ಹಸುರೆಂದರೆ, ಮಳೆ, ಹಸುರೆಂದರೆ ಅನ್ನ, ಹಸುರೆಂದರೆ ನೀರು, ಹಸುರೆಂದರೆ ಜೀವ, ಪ್ರಾಣ, ಉಸಿರು ಆದ್ದರಿಂದ ಹಸುರಿನ ಸಂಕೇತವಾದ ಕಾಡನ್ನು ಬೆಳಸಬೇಕು, ಉಳಿಸಬೇಕು ಎಂಬುದನ್ನು ಈ ವಾಕ್ಯ ಸ್ವಾರಸ್ಯಪೂರ್ಣವಾಗಿ ಅಭಿವ್ಯಕ್ತಿಸುತ್ತದೆ.

**34. 'ಶೌಚಾಲಯ ಇಲ್ಲದ ಮನೆಗೆ ಹೆಣ್ಣು ಕೊಡಬೇಡಿ'**

**ಉತ್ತರ :** ಶೌಚ ಎಂದರೆ ಸ್ವಚ್ಚತೆ. ಸ್ವಚ್ಚತೆ ಎಲ್ಲಿ ಇರುತ್ತದೆಯೋ ಅಲ್ಲಿ ಆರೋಗ್ಯ. ಆರೋಗ್ಯವಿಲ್ಲದಿದ್ದರೆ ಮನುಷ್ಯನಿಗೆ ಆಪತ್ತು. ಆದ್ದರಿಂದ ಶೌಚಕ್ಕೆ ಮೂಲವಾದ ಶೌಚಾಲಯ ನಿರ್ಮಾಣ ಮಾಡಿಸಿಕೊಳ್ಳುವುದು ಆರೋಗ್ಯಕ್ಕೆ ಶ್ರೇಯಕರ. ಹಿಂದಿನ ಕಾಲದ ಜನರು ಶೌಚಾಲಯದ ಪರಿಕಲ್ಪನೆ ಇಲ್ಲದಿದ್ದರಿಂದ ಬಯಲು ಶೌಚಕ್ಕೆ ಹೋಗುತ್ತಿದ್ದರು. ಇದರಿಂದ ರೋಗಗಳು ಹರಡಿ ಜೀವಕ್ಕೆ ಕುತ್ತು ಬರುತ್ತಿದ್ದವು. ಅಲ್ಲದೆ ಮಹಿಳೆಯರಂತೂ ಬಯಲು ಶೌಚದಿಂದ ಸಾಕಷ್ಟು ಮುಜುಗರವನ್ನು, ತೊಂದರೆಯನ್ನು ಅನುಭವಿಸುತ್ತಾರೆ. ಆರೋಗ್ಯಕ್ಕೆ ಮತ್ತು ಮಾನ ಕಾಪಾಡಲು ಶೌಚಾಲಯ ಎಷ್ಟು ಮುಖ್ಯವೆಂಬುದನ್ನು ಹೆಣ್ಣನ್ನು ಕೊಟ್ಟು ಮದುವೆ ಮಾಡಿಕೊಡುವ ತಂದೆ ತಾಯಿಗಳಿಗೆ ಗೊತ್ತಿರುತ್ತದೆ. ಆದ್ದರಿಂದ ಹೆಣ್ಣನ್ನು

ಮದುವೆ ಮಾಡಿಕೊಡಬೇಕಾದರೆ ಆ ಮನೆಯಲ್ಲಿ ಶೌಚಾಲಯ ಇರಬೇಕು. ಇಲ್ಲವಾದಲ್ಲಿ ತೊಂದರೆ ಅನುಭವಿಸಬೇಕಾಗುತ್ತದೆ. ಶೌಚದ ಸಂದರ್ಭದಲ್ಲಿ ಹೆಣ್ಣು ಮಕ್ಕಳಿಗೆ ಸಂರಕ್ಷಣೆ ಇರಬೇಕಾದರೆ ಶೌಚಾಲಯ ಅಗತ್ಯ. ಈ ಉದ್ದೇಶದಿಂದಲೇ **"ಶೌಚಾಲಯ ಇಲ್ಲದ ಮನೆಗೆ ಹೆಣ್ಣು ಕೊಡಬೇಡಿ"** ಎಂಬ ಘೋಷ ವಾಕ್ಯ ಹುಟ್ಟಿಕೊಂಡಿದೆ.

**ಸ್ವಾರಸ್ಯ :** ಹೆಣ್ಣು ಮಕ್ಕಳನ್ನು ಮದುವೆ ಮಾಡಿಕೊಡಬೇಕಾದರೆ ಗಂಡಿನ ಮನೆಯಲ್ಲಿ ಶೌಚಾಲಯ ಇರಬೇಕು. ಇಲ್ಲದಿದ್ದರೆ ಅಂತಹ ಮನೆಗೆ ಹೆಣ್ಣು ಮಕ್ಕಳನ್ನು ಮದುವೆ ಮಾಡಿಕೊಡಬಾರದೆಂದು ಸ್ವಾರಸ್ಯಪೂರ್ಣವಾಗಿ ಘೋಷವಾಕ್ಯ ರಚಿತವಾಗಿದೆ.

**35. 'ಗೆಳೆತನದಲ್ಲಿ ನಂಬಿಕೆ ದ್ರೋಹ ಮಾಡುವುದು ತಪ್ಪು'**

**ಉತ್ತರ :** ಗೆಳೆತನ ಅಮೂಲ್ಯವಾದದ್ದು, ಇದಕ್ಕೆ ಬಡವ, ಶ್ರೀಮಂತ, ಜಾತಿ, ಕುಲ ಗೋತ್ರ ಇರುವುದಿಲ್ಲ. ಇವುಗಳನ್ನು ನೋಡಿ ಗೆಳೆತನ ಮಾಡಿದರೆ ಅದು ನಿಜವಾದ ಗೆಳೆತನವಲ್ಲ. ನಂಬಿಕೆಗೆ ಇನ್ನೊಂದು ಹೆಸರು ಗೆಳೆತನ. ಉತ್ತಮ ಸ್ನೇಹಿತರು ತಮ್ಮ ಎಲ್ಲ ಕಷ್ಟ ಸುಖಗಳನ್ನು ಪರಸ್ಪರ ಹಂಚಿಕೊಳ್ಳುತ್ತಾರೆ. ತನ್ನ ಭಾವನೆಗಳನ್ನು, ಕನಸುಗಳನ್ನು ಹೇಳಿಕೊಂಡಿರುತ್ತಾರೆ. ಇವುಗಳನ್ನು ಹೇಳಿಕೊಳ್ಳವಾಗ ತುಂಬಾ ನಂಬಿಕೆ, ವಿಶ್ವಾಸವನ್ನು ಇಟ್ಟುಕೊಂಡಿರುತ್ತಾರೆ. ಗೆಳೆತನಕ್ಕೆ ಮೋಸ, ವಂಚನೆ, ಚಂಚಲತೆಗಳಿರುವುದಿಲ್ಲ. ಹೀಗೆ ಉತ್ತಮ ಸ್ನೇಹಿತರು ಯಾವುದೋ ಗಳಿಗೆಯಲ್ಲಿ, ಯಾವುದೋ ಉದ್ದೇಶದಿಂದ ಮೋಸಮಾಡಿ ನಂಬಿಗೆ ದ್ರೋಹ ಮಾಡಿದರೆ ನಂಬಿಕೆ, ವಿಶ್ವಾಸ ಹಾಳಾಗಿ ಹೋಗುತ್ತದೆ. ನಂಬಿಕೆ ದ್ರೋಹ ಮಾಡಿದಾಗ ಆಗುವ ದುಃಖ, ನೋವು ಅನುಭವಿಸಿದವರಿಗೆ ಗೊತ್ತು. ಮತ್ತೆ ಹೊಸ ಗೆಳೆಯರ ಮೇಲೆ ವಿಶ್ವಾಸ, ನಂಬಿಕೆ ಇಡುವುದು ಕಷ್ಟವಾಗುತ್ತದೆ.

**ಸ್ವಾರಸ್ಯ :** ಉಪ್ಪಿಗಿಂತಲೂ ರುಚಿಯೂ ತಾಯಿಗಿಂತಲೂ ಬಂಧುವಿಲ್ಲ ಎಂಬು ನಾಣ್ಣುಡಿಯನ್ನು ಕೇಳಿದ್ದೇವೆ. ಇದಕ್ಕೂ ಮಿಗಿಲಾದದ್ದು ಗೆಳಗೆತನ. ಆದ್ದರಿಂದ ಗೆಳೆತನದಲ್ಲಿ ನಂಬಿಕೆ ದ್ರೋಹ ಮಾಡುವುದು ತಪ್ಪು ಎಂಬ ಹಿತನುಡಿ ರಚಿತವಾಗಿರುವುದು ಅರ್ಥಗರ್ಭಿತವಾಗಿದೆ.

**36. 'ದುಡಿಯುವವನ ಕಂಡರೆ ಬಡತನ ಓಡುತ್ತದೆ'**

**ಉತ್ತರ :** ದುಡಿಮೆಯೇ ದುಡ್ಡಿನ ತಾಯಿ ಎಂಬ ಗಾದೆಯನ್ನು ಕೇಳಿದ್ದೇವೆ. ದುಡ್ಡು ಯಾರೋ ಒಬ್ಬರ ಸ್ವತ್ತಾಗಬಹುದು. ಆದರೆ ದುಡಿಮೆ ಯಾರೊಬ್ಬರ ಸ್ವತ್ತಲ್ಲ. ಅದು ಬಡವ, ಶ್ರೀಮಂತ, ಮೇಲು, ಕೀಳು ಎಂದು ಯಾರನ್ನು ಎಣಿಸುವುದಿಲ್ಲ. ಬಡತನದಲ್ಲಿರುವವರು ದುಡಿಯುವುದರಿಂದ ತಮ್ಮ ಬಡತನ ಅವರಿಂದ ದೂರ ಓಡುತ್ತದೆ.

ಸೋಮಾರಿ ಕೈಯಲ್ಲಿ ಏನೂ ಮಾಡಕಾಗದೆ, ಅಯ್ಯೋ ನಮ್ಮ ಜೀವನದಲ್ಲಿ ಏನು ಮಾಡೋಕೆ ಆಗಲ್ಲ, ನಮಗೆ ತುಂಬಾ ಬಡತನ, ನಮ್ಮ ಕಡೆ ದುಡ್ಡಿಲ್ಲ, ಬಂಗಾರ ಇಲ್ಲ, ಆಸ್ತಿ ಇಲ್ಲ ಎಂದು ಕೈಯಲ್ಲಿ ಆಗದೆ ಇರುವವನು ಹೇಳುತ್ತಾನೆ. ಅದೇ ಸೋಮಾರಿ ಕಷ್ಟಪಟ್ಟು ದುಡಿಯುತ್ತೇನೆ, ಸಂಪಾದಿಸುತ್ತೇನೆ. ಎಂದು ಆತ್ಮ ವಿಶ್ವಾಸದಿಂದ ಕೆಲಸ ಮಾಡಿದರೆ ಬಡತನ ತನ್ನಿಂದ ತಾನೇ ಓಡಿ ಹೋಗುತ್ತದೆ. ಅದಕ್ಕೆ ಶರಣರು ಕಾಯಕವೇ ಕೈಲಾಸವೆಂದು ದುಡಿದರು.

**ಸ್ವಾರಸ್ಯ** : ದುಡಿಮೆಗೆ ತಕ್ಕ ಪ್ರತಿಫಲ ಇದ್ದೇ ಇರುತ್ತದೆ. ದುಡಿದರೆ ಬಡತನ ನಮ್ಮಿಂದ ದೂರ ಹೋಗುತ್ತದೆ ಎಂದು ಅರ್ಥೈಸುವುದರೊಂದಿಗೆ, ದುಡಿಮೆಯ ಮಹತ್ತ್ವವನ್ನು ವಿವರಿಸುತ್ತದೆ.

37. 'ಹಾವಿನ ಬಾಯಿಗೆ ತುತ್ತಾದರೂ ಸಮಾಜದ ಬಾಯಿಗೆ ತುತ್ತಾಗಬೇಡ'

**ಉತ್ತರ :** ಹಾವು ಕಚ್ಚಿದರೆ ಔಷಧಿಯನ್ನು ಪಡೆದು ಹೇಗೋ ಜೀವ ಉಳಿಸಿಕೊಳ್ಳಬಹುದು; ಇಲ್ಲವೇ ಒಂದು ಸಾರಿ ಮರಣ ಹೊಂದಬಹುದು. ಆದರೆ ಸಮಾಜದಿಂದ ಅವಮಾನಕ್ಕೆ ಒಳಗಾದರೆ ಅದರ ನೋವು ಅನುಭವಿಸಿದವರಿಗೆ ಗೊತ್ತು. ಆದ್ದರಿಂದ ಆಡುವವರ ಬಾಯಿಗೆ ಸಿಗಬೇಡ ಎಂದು ಹಿರಿಯರು ಹೇಳುತ್ತಾರೆ. ಒಂದು ಸಲ ತಪ್ಪು ಮಾಡಿದರೆ ಸಮಾಜದಲ್ಲಿನ ಜನರು ಚುಚ್ಚು ಮಾತನಾಡುತ್ತ ಚುಚ್ಚಿ ಚುಚ್ಚಿ ಕೊಲ್ಲುತ್ತಾರೆ. ಬದುಕುವುದಕ್ಕೂ ಬಿಡುವುದಿಲ್ಲ, ಸಾಯುವುದಕ್ಕು ಬಿಡುವುದಿಲ್ಲ. ಸಮಾಜದಲ್ಲಿ ಬಾಳಿ ಬದುಕಬೇಕಾದರೆ ಗೌರವ, ನಂಬಿಕೆ, ಮರ್ಯಾದೆ ಬಹಳ ಮುಖ್ಯವಾಗುತ್ತದೆ. ಆದ್ದರಿಂದ ಸಮಾಜ ನಮ್ಮನ್ನು ಒಳ್ಳೆಯ ರೀತಿಯಿಂದ ನೋಡಬೇಕಾದರೆ ಎಲ್ಲರಿಗೂ ಬೇಕಾಗಿ ಬಾಳಬೇಕು. ಒಂದು ಸಾರಿ ಕೆಟ್ಟ ಕೆಲಸವನ್ನು ಮಾಡಿದರೆ ಸಮಾಜ ಸದಾ ನಮ್ಮನ್ನು ಹೀಯಾಳಿಸುತ್ತ ಬರುತ್ತದೆ. ಆದ್ದರಿಂದ ಸಮಾಜ ನಮ್ಮನ್ನು ಒಳ್ಳೆಯ ರೀತಿಯಿಂದ ನೋಡಬೇಕಾದರೆ ಒಳ್ಳೆಯ ನಡತೆಯಿಂದ ಇರಬೇಕು.

**ಸ್ವಾರಸ್ಯ :** ಅಡಕೆಗೆ ಹೋದ ಮಾನ ಆನೆ ಕೊಟ್ಟರೂ ಬಾರದು ಎಂಬ ಗಾದೆ ಮಾತನ್ನು ಕೇಳಿದ್ದೇವೆ. ಆದ್ದರಿಂದ ತಪ್ಪು ಮಾಡಿ ಸಮಾಜದಲ್ಲಿ ಅವಮಾನಕ್ಕೊಳಗಾಗಬೇಡ. ಸಮಾಜದ ಜನರ ಚುಚ್ಚು ಮಾತುಗಳು ಹಾವಿನ ವಿಷಕ್ಕಿಂತಲೂ ಭಯಂಕರವಾದದ್ದು ಎಂಬುದನ್ನು ಪರೋಕ್ಷವಾಗಿ ವಿವರಿಸುವುದು ಸ್ವಾರಸ್ಯಪೂರ್ಣವಾಗಿದೆ.

38. 'ನೀರು ಉಳಿಸಿ; ಭವಿಷ್ಯ ರಕ್ಷಿಸಿ'

**ಉತ್ತರ :** ಸಕಲ ಜೀವರಾಶಿಗಳಿಗೆ ನೀರು ಅಮೂಲ್ಯವಾದದ್ದು. ಅನ್ನವಿಲ್ಲದೆ ಸ್ವಲ್ಪ ಕಾಲ ಬದುಕಬಹುದು. ಆದರೆ ನೀರಿಲ್ಲದೆ ಬದುಕುವುದು ಅಸಾಧ್ಯ. ಏಕೆಂದರೆ ನಮ್ಮ ದೇಹ ಶೇಕಡ 70% ನೀರಿನಿಂದಲೇ ಕೂಡಿರುವಂತಹದ್ದು. ನಾವು ಬದುಕಬೇಕಾದರೆ ನೀರು ಅತಿ ಆಗತ್ಯ. ನಮ್ಮ ಜೀವದ ಭವಿಷ್ಯ ನೀರಿನ ಮೇಲೆ ನಿಂತಿದೆ. ಆದ್ದರಿಂದ ನೀರನ್ನು ಎಷ್ಟು ಬೇಕೋ ಅಷ್ಟನ್ನೆ ಬಳಸಿ, ಅನಗತ್ಯವಾಗಿ ನೀರನ್ನು ಪೋಲು ಮಾಡಬಾರದು. ಇತ್ತೀಚಿನ ದಿನಗಳಲ್ಲಿ ಎಲ್ಲೆಲ್ಲೋ ನೀರಿನ ಹಾಹಾಕಾರವನ್ನು ಕಾಣುತ್ತಿದ್ದೇವೆ. ಆದ್ದರಿಂದ ನೀರನ್ನು ಉಳಿಸಿ, ಸಂರಕ್ಷಣೆ ಮಾಡಬೇಕು.

**ಸ್ವಾರಸ್ಯ :** ನೀರು ನಮ್ಮ ಭವಿಷ್ಯದ ಸಂಕೇತವಿದ್ದಂತೆ, ಆದ್ದರಿಂದ ನೀರನ್ನು ಉಳಿಸಿ ನಮ್ಮ ಭವಿಷ್ಯವನ್ನು ರಕ್ಷಿಸಿಕೊಳ್ಳುವುದು ಮುಖ್ಯ ಎಂಬ ಅರ್ಥವನ್ನು ಸ್ವಾರಸ್ಯಪೂರ್ಣವಾಗಿ ತಿಳಿಸುತ್ತದೆ.

**X. ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿರಿ** **1*4=4**

39. **ಒಂದು ಮುಂಜಾವಿನಲಿ** ತುಂತುರಿನ ಸೋನೆಮಳೆ
'ಸೋ' ಎಂದು ಶ್ರುತಿಹಿಡಿದು ಸುರಿಯುತ್ತಿತ್ತು.
ಅದಕೆ ಹಿಮ್ಮೇಳವೆನೆ ಸೋಸಿ ಬಹ ಸುಳಿಗಾಳಿ
ತೆಂಗು ಗರಿಗಳ ನಡುವೆ **ನಸುಳುತಿತ್ತು.**

**ಅಥವಾ**

**ಇಳೆವೆಣ್ಣು** ಮೈದೊಳೆದು ಮಕರಂದದರಿಶಿಣದಿ
ಹೂಮುಡಿದು ಮದುಮಗಳ ಹೋಲುತಿತ್ತು;
ಮೂಡಣದ ನೇಸರನ ನಗೆಮೊಗದ ಶ್ರೀಕಾಂತಿ
ಬಿಳಿಯಮೋಡದ ಹಿಂದೆ **ಹೊಳೆಯುತಿತು**

**XI. ಈ ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ**

40. ಮನೆಯೊಳಗೆ ಮನೆಯೊಡೆಯನಿದ್ದಾನೊ ಇಲ್ಲವೋ **1*4=4**
ಹೊಸ್ತಿಲಲ್ಲಿ ಹುಲ್ಲು ಹುಟ್ಟಿ, ಮನೆಯೊಳಗೆ ರಜತುಂಬಿ.
ಮನೆಯೊಳಗೆ ಮನೆಯೊಡೆಯನಿದ್ದಾನೊ ಇಲ್ಲವೋ,
ತನುವಿನೊಳಗೆ ಹುಸಿತುಂಬಿ, ಮನದೊಳಗೆ ವಿಷಯ ತುಂಬಿ.
ಮನೆಯೊಳಗೆ ಮನೆಯೊಡೆಯನಿಲ್ಲ ಕೂಡಲ ಸಂಗಮದೇವ

**ಉತ್ತರ :** ಬಸವಣ್ಣನವರು ಈ ವಚನದಲ್ಲಿ ನಮ್ಮ ಮನಸ್ಸಿನ ಪರಿಶುದ್ಧತೆಯ ವಿಚಾರವನ್ನು ಹೇಳಿದ್ದಾರೆ. ಮನೆಯ ಮುಂದೆ ಹೊಸ್ತಿಲಲ್ಲಿ ಹುಲ್ಲು ಬೆಳೆದು, ಕಸಕಡ್ಡಿ ಹರಡಿ, ಮನೆಯೊಳಗಡೆ ದೂಳು ತುಂಬಿದಲ್ಲಿ ಆ ಮನೆಯ ಒಡೆಯ ಅಲ್ಲಿ ವಾಸ ಮಾಡುತ್ತಿಲ್ಲ ಎಂದು ತಿಳಿಯುತ್ತದೆ. ಮನೆಯ ಹೊರಗಡೆ ಕಸಗುಡಿಸಿ, ಮನೆಯೋಳಗಡೆ ದೂಳು ಒರಸಿ ಸ್ವಚ್ಚವಾಗಿ ಇದ್ದಲ್ಲಿ ಆ ಮನೆಯಲ್ಲಿ ವಾಸವಿದ್ದಾರೆ ಎಂದು ತಿಳಿಯಬಹುದು. ಮನೆಯ ಸ್ವಚ್ಚತೆಯೇ ಮನೆಯಲ್ಲಿನ ಯಜಮಾನನ ಬಗ್ಗೆ ತಿಳಿಸಿಕೊಡುತ್ತದೆ. ಹಾಗೆಯೇ ಮನೆಯ ರೀತಿಯಲ್ಲಿ ನಮ್ಮ ಮನಸ್ಸು ಇರುವುದು. ಇದರ ಒಡೆಯ ದೇವರು. ನಮ್ಮ ಮನದಲ್ಲಿ ಸುಳ್ಳು, ಕಪಟ ಮುಂತಾದ ಕೆಟ್ಟ ಆಲೋಚನೆಗಳು ತುಂಬಿದ್ದಲ್ಲಿ ಅದು ಸಹ ಮನೆಯಲ್ಲಿ ಇರುವ ಕಸದ ಹಾಗೆ ಇರುತ್ತದೆ. ಅಲ್ಲಿ ದೇವರು ವಾಸಿಸುವುದಿಲ್ಲ. ಪರಿಶುದ್ಧ ಮನಸ್ಸಿರುವ ಮನಸ್ಸೆಂಬ ದೇಹದಲ್ಲಿ ಮಾತ್ರ ದೇವರು ವಾಸಿಸಲು ಸಾಧ್ಯ. ನಮ್ಮ ಮನದೊಳಗೆ ಸುಳ್ಳು, ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರ ಮುಂತಾದ ಕೆಟ್ಟ ವಿಷಯಗಳನ್ನು ಇಟ್ಟುಕೊಳ್ಳಬಾರದು. ಮನೆಯನ್ನು ಸ್ವಚ್ಚವಾಗಿಟ್ಟುಕೊಂಡು ಒಡೆಯ ಹೇಗೆ ವಾಸಿಸುತ್ತಾನೆಯೋ ಹಾಗೆ ಮನದಲ್ಲಿ ಸ್ವಚ್ಚತೆ ಕಾಪಾಡಿ ಕೊಂಡಲ್ಲಿ ದೇವರು ವಾಸಿಸುತ್ತಾನೆ.

ನಮ್ಮ ಮನಸ್ಸು ಪರಿಶುದ್ಧವಾಗಿರಬೇಕಾದರೆ ಸತ್ಯ, ನ್ಯಾಯ ಮುಂತಾದ ಒಳ್ಳೆಯ ಆಲೋಚನೆಗಳು ಮುಖ್ಯ ಎಂಬ ಮೌಲ್ಯಗಳನ್ನು ಪ್ರತಿಪಾದಿಸುತ್ತದೆ.

**XII. ಈ ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ. 2*4=8**

**41. ಪ್ಲಾಸ್ಟಿಕ್ ಬಳಕೆಯಿಂದಾಗುವ ಮಾರಕಗಳೇನು? ಮತ್ತು ಅದರ ಬಳಕೆ ತಪ್ಪಿಸಲು ಪರ್ಯಾಯ ವ್ಯವಸ್ಥೆಗಳಾವುವು?**

**ಉತ್ತರ :** ಪ್ಲಾಸ್ಟಿಕ್ ಬಳಕೆ ನಮ್ಮ ಆರೋಗ್ಯದ ಮೇಲೆ ಪರಿಣಾಮ ಬೀರುತ್ತದೆ. ಪರಿಸರ ಮಾಲಿನ್ಯ ಉಂಟಾಗುತ್ತದೆ. ಅಲ್ಲಲ್ಲಿ ಬಿಸಾಡಿದ ಪ್ಲಾಸ್ಟಿಕ್ ವಸ್ತುಗಳು ದನಕರು ಮುಂತಾದ ಪಶುಗಳ ಹೊಟ್ಟೆ ಸೇರಿ, ಜೀರ್ಣವಾಗದೆ, ಪಶುಗಳ ಜೀವಕ್ಕೆ ಕುತ್ತು ಉಂಟಾಗುತ್ತದೆ. ಪೆಪ್ಸಿ, ಕೋಕಾಕೋಲ, ತಮ್ಸಪ್, ಪಾಂಟ, ಮಿರಿಂಡ್ ಮುಂತಾದ ಪಾನಿಯಗಳು ಪ್ಲಾಸ್ಟಿಕ್ ಬಾಟಲಿನಲ್ಲಿ ಬರುವುದರಿಂದ, ಹಾಗೂ ಹೋಟೆಲ್ ಹಾಗೂ ಮುಂತಾದ ಸ್ಥಳಗಳಲ್ಲಿ ಬಿಸಿಯಾದ ಆಹಾರ ಪದಾರ್ಥಗಳನ್ನು ಪ್ಲಾಸ್ಟಿಕ್ ಹಾಳೆಯಲ್ಲಿ ಕಟ್ಟುವುದರಿಂದ ಪ್ಲಾಸ್ಟಿಕ್‌ನ ವಿಷಕಾರಿ ಅಂಶಗಳು ಆಹಾರದ ಮೂಲಕ ದೇಹ ಸೇರಿ ಅನಾರೋಗ್ಯವನ್ನುಂಟು ಮಾಡುತ್ತದೆ. ಒಟ್ಟಿನಲ್ಲಿ ಪ್ಲಾಸ್ಟಿಕ್ ಕವರ್, ಚೀಲ ಮುಂತಾದ ಪ್ಲಾಸ್ಟಿಕ್‌ನಿಂದ ತಯಾರಿಸಿದ ವಸ್ತುಗಳನ್ನು ಬಳಸುವುದರಿಂದ ಅದರಲ್ಲಿನ ರಾಸಾಯನಿಕಗಳು ನಮ್ಮ ಆರೋಗ್ಯದ ಮೇಲೆ ಪರಿಣಾಮಗಳನ್ನುಂಟು ಮಾಡಬಹುದು.

ಒಮ್ಮೆ ಬಳಸಿದ ಚಾಕ್ ಲೇಟ್ ಕವರ, ಕುರ್‌ಕುರೆ ಕವರ್, ಸ್ಟ್ರಾ, ಮುಂತಾದ ಪ್ಲಾಸ್ಟಿಕ್ ತ್ಯಾಜ್ಯಗಳು ಕರಗದೆ ಅಥವಾ ಬೇಗ ಕೊಳೆಯದೆ ಇರುವುದರಿಂದ ಪರಿಸರದ ಸ್ವಚ್ಚತೆಗೆ ಧಕ್ಕೆಯಾಗುತ್ತದೆ. ಅಲ್ಲದೆ ಬಿಸಿಲಿನ ತಾಪಕ್ಕೆ ಅಥವಾ ಬೆಂಕಿಗೆ ಆಹುತಿಯಾಗಿ ಹೊಗೆಯನ್ನು ಬಿಡುವುದರಿಂದ, ರಾಸಾಯನಿಕಗಳನ್ನು ಹೊರಸೂಸುವುದರಿಂದ ಪರಿಸರ ಮಾಲಿನ್ಯ ಉಂಟಾಗುತ್ತದೆ. ಪರಿಸರ ಅಸಮತೋಲನಕ್ಕೆ ಕಾರಣವಾಗುತ್ತದೆ.

ಪ್ಲಾಸ್ಟಿಕ್ ಹಾವಳಿಗೆ ಮಿತಬಳಕೆಯೆ ಸೂಕ್ತ ಪರಿಹಾರ. ತರಕಾರಿ ಅಥವಾ ಅಗತ್ಯ ವಸ್ತುಗಳನ್ನು ತರಲು ಹೋಗುವಾಗ ಬಟ್ಟೆಯ ಕೈ ಚೀಲವನ್ನು ತೆಗೆದುಕೊಂಡು ಹೋಗಬಹುದು. ಬಿಸಿಯಾದ ಆಹಾರ ಪದಾರ್ಥಗಳನ್ನು ತರಲು ಹೋಟೆಲ್ ಅಥವಾ ಮುಂತಾದ ಸ್ಥಳಗಳಿಗೆ ಹೋಗುವಾಗ ಸ್ಟೀಲ್ ಬಾಕ್ಸ್‌ಗಳನ್ನು, ಬಟ್ಟೆಯ ಕೈಚೀಲಗಳನ್ನು ತೆಗೆದುಕೊಂಡು ಹೋಹಬೇಕು. ಪ್ಲಾಸ್ಟಿಕ್ ಚೀಲಕ್ಕೆ ಬದಲಾಗಿ ಪೇಪರ್‌ನಿಂದ ತಯಾರಿಸಿದ ಪೊಟ್ಟಣಗಳನ್ನು ಬಳಸಬಹುದು. ಆಹಾರ, ಮುಂತಾದ ವಸ್ತುಗಳನ್ನು ಸ್ಟೀಲ್ ಅಥವಾ ಗಾಜಿನ ಡಬ್ಬದಲ್ಲಿ ಇಡುವುದು. ಮದುವೆ-ಮುಂಜಿ ಇತ್ಯಾದಿ ಕಾರ್ಯಕ್ರಮಗಳಲ್ಲಿ ನೀರು ಕುಡಿಯಲು ಒಂದು ಸಲ ಉಪಯೋಗಿಸಿ ಬಿಸಾಡುವಂತಹ ಪ್ಲಾಸ್ಟಿಕ್ ಲೋಟದ ಬದಲಾಗಿ ಸ್ಟೀಲ್, ಗಾಜು, ಅಥವಾ ಮರುಬಳಕೆಯ ದಪ್ಪನಾದ ಪ್ಲಾಸ್ಟಿಕ್ ಲೋಟಗಳನ್ನು ಉಪಯೋಗಿಸಬೇಕು. ತಂಪು ಪಾನಿಯ ಅಥವಾ ಎಳ ನೀರನ್ನು ಕುಡಿಯುವಾಗ ಸ್ಟ್ರಾಗಳನ್ನು ಬಳಸಬಾರದು.

**ಅಥವಾ**

**ತಂಬಾಕಿನ ಉತ್ಪನ್ನಗಳಾವುವು? ಮತ್ತು ಅವುಗಳ ಸೇವನೆಯಿಂದ ಮನುಷ್ಯರ ಆರೋಗ್ಯದ ಮೇಲೆ ಉಂಟಾಗುತ್ತಿರುವ ದುಷ್ಪರಿಣಾಮಗಳಾವುವು?**

**ಉತ್ತರ :** ತಂಬಾಕಿನಿಂದ ಬೀಡಿ, ಸೀಗರೇಟ್, ಗುಟುಕ. ಹುಕ್ಕ ಮುಂತಾದ ವಸ್ತುಗಳನ್ನು ಉತ್ಪಾದಿಸಲಾಗುತ್ತದೆ. ಅವುಗಳ ಸೇವನೆಯಿಂದ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತದೆ. ತಂಬಾಕಿನ ಬಳಕೆ ಮನುಷ್ಯ ಆರೋಗ್ಯಕ್ಕೆ ಒಡ್ಡಿರುವ ಏಕೈಕ ಅಪಾಯ ಹಾಗೂ ಜಾಗತಿಕವಾಗಿ ಅಕಾಲಿಕ ಸಾವುಗಳಿಗೆ ಕಾರಣವಾಗಿರುವ ಪ್ರಮುಖ ಕಾರಣಗಳಲ್ಲೊಂದು ಎಂದು ಹೇಳಲಾಗಿದೆ. ಹೃದಯ ಸಂಬಂಧಿ ಕಾಯಿಲೆಗಳು, ಉಸಿರಾಟದ ಕಾಯಿಲೆಗಳು, ಬಾಯಿಯ ಕಾಯಿಲೆಗಳು ಮತ್ತು ಕ್ಯಾನ್ಸರ್ ಸೇರಿದಂತೆ ಹಲವು ರೋಗಗಳು ಬರುತ್ತದೆ. ಬಾಯಿಹುಣ್ಣು ಆಗಿ ಆಹಾರ ಸೇವನೆಗೆ ತೊಂದರೆಯಾಗುತ್ತದೆ. ಬಾಯಿಯ ಕ್ಯಾನ್ಸರ್ ನಾಲಿಗೆ, ಧ್ವನಿಪೆಟ್ಟಿಗೆ ಮತ್ತು ಗಂಟಲಕುಳಿ, ಅನ್ನನಾಳ, ಹೊಟ್ಟೆ, ಪಿತ್ತಕೋಶ, ಮೂತ್ರಕೋಶ, ಗರ್ಭಾಶಯ, ಗರ್ಭಕಂಠ ಮತ್ತು ಶ್ವಾಸಕೋಶಗಳಿಗೆ ತೊಂದರೆಯಾಗಬಹುದು. ನರಗಳ ದೌರ್ಬಲ್ಯ ಉಂಟಾಗುತ್ತದೆ. ಪುರುಷರಲ್ಲಿ ಫಲವತ್ತತೆ ಮತ್ತು ಲೈಂಗಿಕ ದುರ್ಬಲತೆ ಕಡಿಮೆಯಾಗಿದೆ. ತಂಬಾಕು ಸೇವನೆ ವ್ಯಸನಿಯಾಗಬಹುದು. ಆರ್ಥಿಕವಾಗಿ ಹೊರೆಯಾಗುತ್ತದೆ. ತಂಬಾಕು ಬಳಕೆಯು ಮನೆಯ ಖರ್ಚು ಬಳಸುವ ಆಹಾರ ಮತ್ತು ಆಶ್ರಯದಂತಹ ಮೂಲಭೂತ ಅಗತ್ಯಗಳಿಂದ ತಂಬಾಕಿಗೆ ಬಳಸುವ ಮೂಲಕ ಬಡತನಕ್ಕೆ ಕೊಡುಗೆ ನೀಡುತ್ತದೆ

ಶಿಶುಗಳಲ್ಲಿ ಇದು ಹಠಾತ್ ಶಿಶು ಸಾವಿನ ಪ್ರಮಾಣದ ಅಪಾಯವನ್ನು ಹೆಚ್ಚಿಸುತ್ತದೆ. ಗರ್ಭಿಣಿ ಮಹಿಳೆಯರಲ್ಲಿ ಇದು ಗರ್ಭಧಾರಣೆಯ ತೊಂದರೆಗಳು ಮತ್ತು ಕಡಿಮೆ ಜನನ ತೂಕವನ್ನು ಉಂಟುಮಾಡುತ್ತದೆ. ಸಾರ್ವಜನಿಕ ಸ್ಥಳಗಳಲ್ಲಿ ಜನರು ಸಿಗರೇಟ್, ಬೀಡಿ ಮತ್ತು ಹುಕ್ಕಾದಂತಹ ತಂಬಾಕು ಉತ್ಪನ್ನಗಳನ್ನು ಬಳಸಿದಾಗ ಅದರಿಂದ ಉಂಟಾಗುವ ಹೊಗೆಯು ಆ ಸ್ಥಳವನ್ನು ಆವರಿಸಿ ಅಲ್ಲಿರುವ ಜನರು ಅದನ್ನು ಉಸಿರಾಟದ ಮೂಲಕ ಸೇವಿಸಿ ಹಲವಾರು ರೋಗಗಳಿಗೆ ಕಾರಣವಾಗಬಹುದು. ಒಟ್ಟಿನಲ್ಲಿ ತಂಬಾಕಿನ ಬಳಕೆಯಿಂದ ಹೃದಯ ಮತ್ತು ಶ್ವಾಸಕೋಶಗಳಿಗೆ ಘಾಸಿಯನ್ನುಂಟುಮಾಡುತ್ತವೆ.

**42. 9ನೇ ತರಗತಿಯ 'ಪಾರಿವಾಳ' ಪದ್ಯದ ಸಾರಾಂಶವನ್ನು ಕಥೆಯ ರೂಪದಲ್ಲಿ ಬರೆಯಿರಿ.**

**ಉತ್ತರ :** 'ಪಾರಿವಾಳ' ಎಂಬ ಕವನವು ಒಂದು ಕಥನ ಕವನವಾಗಿದೆ. ಒಂದು ದಟ್ಟವಾದ ಕಾಡೊಂದಿತ್ತು. ಆ ಕಾಡಿನ ದೊಡ್ಡದಾದ ಮರದ ಪೊಟರಿನಲ್ಲಿ ಮುದ್ದಾದ ಬಿಳಿ ಪಾರಿವಾಳ ಜೋಡಿ ಸಂಸಾರ ಹೂಡಿ ಸುಃಖದಿಂದ ಬಾಳುತ್ತಿದ್ದವು. ಈ ಪಾರಿವಾಳಗಳ ಜೋಡಿ ಹಗಲುರಾತ್ರಿ ಒಂದನೊಂದು ಬಿಟ್ಟಿರದೆ ಜೊತೆಯಾಗಿ ಬಾಳುತ್ತಿದ್ದವು. ಕಾಲಗತಿಸಿದಂತೆ ಮೊಟ್ಟೆಯೊಡೆದು ಮರಿಗಳಾಗಿ ಆ ಮರಿಗಳ ಮಧುರ ಸದ್ದು ಕೇಳಿ ಸಂತೋಷದಿಂದ ಜೀವನ ಸಾಗಿಸುತ್ತಿದ್ದವು. ಆನಂದದಿಂದ ಬಾಳು ಸಾಗಿಸುತ್ತಿದ್ದವು. ಹೀಗಿರುವಾಗ ಬೇಡನೊಬ್ಬನು ಅಲ್ಲಿಗೆ ಬರುತ್ತಾನೆ. ಪಾರಿವಾಳಗಳನ್ನು ನೋಡಿ ಬಲೆಯನ್ನು ಹಾಕುತ್ತಾನೆ. ಈ ಬಲೆಯಲ್ಲಿ ಮೊದಲು ಮರಿ ಪಾರಿವಾಳಗಳು ಬಿದ್ದು ಸಿಲುಕಿದವು, ಬಲೆಯಿಂದ ಹೊರ ಬರಲು ಚೀತ್ಕರಿಸತೊಡಗಿದವು, ಬಲೆಯಲ್ಲಿ ಬಿದ್ದು ಕಷ್ಟ ಪಡುವುದನ್ನು ನೋಡಿದ ತಾಯಿ ಪಾರಿವಾಳ ಸ್ವಲ್ಪವೂ ಯೋಚಿಸದೆ, ತಡಮಾಡದೆ ಬಲೆಯಲ್ಲಿ ಬಿದ್ದಿತು. ತನ್ನ ಮರಿ ಪಾರಿವಾಳಗಳು, ಹೆಂಡತಿ ಪಾರಿವಾಳ ಬಲೆಯಲ್ಲಿ ಬಿದ್ದಿರುವುದನ್ನು ನೋಡಿ ಗಂಡು ಪಾರಿವಾಳವು ಸಹ ಹಿಂದೆ ಮುಂದೆ ನೋಡದೆ ಹೆಂಡತಿ, ಮಕ್ಕಳನ್ನು ಕಾಪಾಡಲು ತಾನು ಬಲೆಗೆ ಬಿದ್ದಿತು. ಮರಿ ಪಾರಿವಾಳಗಳ ಮೇಲಿನ ವ್ಯಾಮೋಹ ತಾಯಿ ಪಾರಿವಾಳ ಬಲೆಯಲ್ಲಿ ಬೀಳುವಂತೆ ಮಾಡಿತು. ಹೆಂಡತಿ, ಮಕ್ಕಳ ಮೇಲಿನ ವ್ಯಾಮೋಹದಿಂದ ವಿವೇಕ ಕಳೆದುಕೊಂಡು ಗಂಡು ಪಾರಿವಾಳ ಸಹ ಬಲೆಯಲ್ಲಿ ಬಿದ್ದಿತು. ಹೊಟ್ಟೆ ಹಸಿವಿನಿಂದಿದ್ದ ಬೇಡನು ಅವುಗಳನ್ನು ಹೊತ್ತುಕೊಂಡು ಹೋದನು. "ಮೋಹ ಮುಸುಕಿದ ಬುದ್ಧಿ ಸರ್ವನಾಶದ ಸಿದ್ಧಿ ವ್ಯಾಮೋಹವನ್ನು ತೊರೆದು ಬಾಳಬೇಕು ಏನು ಬಂದರು ಕೂಡ ತಾಳಬೇಕು" ಎಂಬುದು ಈ ಕಥೆಯ ಭಾವವಾಗಿದೆ.

**ಅಥವಾ**

**ಯೋಧ ಮತ್ತು ಹೆಂಗಸು ಪದ್ಯದ ಸಾರಾಂಶವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.**

**ಉತ್ತರ :** ಸುಡುವ ಬಿಸಿಲು. ಕುದುರೆಯ ಓಟದಿಂದ ಚಿಮ್ಮುತ್ತಿರುವ ಕೆಂಪುಮಣ್ಣಿನ ಧೂಳು. ಅದರಿಂದ ಯೋಧನ ಮೈತುಂಬ ದೂಳು ಅಡರಿದೆ. ಪ್ರಯಾಣ ಮಾಡುತ್ತಿರುವಾಗ ಜನರನ್ನು ಕಂಡು ಯೋಧ ಕುದುರೆಯಿಂದ ಇಳಿಯುತ್ತಾನೆ. ಒಂದು ಗುಡಿಸಲಿನ ಬಳಿ ಬಂದು "ಬಾಯಾರಿಕೆಯಾಗಿದೆ, ಕುಡಿಯಲು ಸ್ವಲ್ಪ ನೀರು ಸುರಿಯುವಿರಾ" ಎಂದು ಕೇಳುತ್ತಾನೆ. ಹೆಂಗಸು ಮಡಕೆಯ ತುಂಬಾ ನೀರನ್ನು ತುಂಬಿಕೊಂಡು ಬಂದು, "ಬಿಸಿಲ ಪ್ರಯಾಣದಿಂದ ನಿಮಗೆ ಆಯಾಸವಾದಂತಿದೆ; ಒಳಗಡೆ ಬಂದು ವಿಶ್ರಾಂತಿ ಪಡೆದುಕೊಳ್ಳಿ" ಎಂದು ಯೋಧನಿಗೆ ಕುಳಿತುಕೊಳ್ಳಲು ಚಾಪೆಯನ್ನು ಹಾಸುತ್ತಾಳೆ. "ಪರವಾಗಿಲ್ಲ, ತಂಪಾಗಿ ಹಬ್ಬಿರುವ ಈ ಮರದ ನೆರಳಲ್ಲೆ ಕುಳಿತುಕೊಳ್ಳುವೆ" ಎಂದು ಯೋಧ ಹೇಳುತ್ತಾನೆ. ಆಗ ಬಟ್ಟಲಿನ ತುಂಬಾ ಜೇನುತುಪ್ಪವನ್ನು, ಚೊಂಬಿನ ತುಂಬಾ ತಣ್ಣನೆಯ ನೀರನ್ನು ತಂದಿರಿಸಿ ಸ್ವೀಕರಿಸಲು ಹೇಳಿ, ಬೀಸಣಿಕೆಯನ್ನು ಕೊಟ್ಟು ಗಾಳಿಯನ್ನು ಬೀಸಿಕೊಳ್ಳಲು ಹೆಂಗಸು ಹೇಳುತ್ತಾಳೆ.

ಆಗ ಇದ್ದಕ್ಕಿದ್ದಂತೆ ದಕ್ಷಿಣ ದಿಕ್ಕಿನಿಂದ ತಂಗಾಳಿ ಬೀಸುತ್ತದೆ. ದೂರದಲ್ಲೆಲ್ಲೋ ಕೋಗಿಲೆಯ ಇಂಪಾದ ಧ್ವನಿ ಕೇಳಿಸುತ್ತದೆ. ಮಾವಿನ ಎಳೆಚಿಗುರಿನ ಪರಿಮಳ ಪಸರಿಸಿ ವಾತಾವರಣವನ್ನು ಆಹ್ಲಾದಕಾರವಾಗಿಸುತ್ತದೆ. ಆ ರಸಮಯ ಕ್ಷಣವನ್ನು ಯೋಧ ಆಸ್ವಾದಿಸುತ್ತಾ ಇದಕ್ಕೆ ಯಾರ ಹಂಗೂ ಇಲ್ಲವೆಂದು ಸಂಭ್ರಮಿಸುತ್ತಾನೆ. ಜೇನು ಸವಿದು, ನೀರು ಕುಡಿದು ಸ್ವಲ್ಪ ಹೊತ್ತು ಮರದ ನೆರಳಲ್ಲಿ ವಿಶ್ರಮಿಸಿ ಯೋಧ ಮತ್ತೆ ಮುಂದಿನ ದೂರ ಪ್ರಯಾಣಕ್ಕೆ ಕುದುರೆಗೆ ಥಡಿ ಹಾಕಿ ಸಿದ್ಧಗೊಳಿಸುತ್ತಾನೆ. ಗುಡಿಸಲ ಹೆಂಗಸಿಗೆ "ಹೋಗಿ ಬರುವೆನು ತಾಯಿ" ಎಂದು ಸತ್ಕಾರಕ್ಕೆ ಧನ್ಯವಾದಗಳನ್ನು ಅರ್ಪಿಸಿ, ಕವಚವನ್ನು ತೊಟ್ಟು, ಖಡ್ಗವನ್ನು ಸೊಂಟದಲ್ಲಿ ಬಿಗಿದು ಕುದುರೆಯೇರಲು ಅಣಿಯಾಗುತ್ತಾನೆ. "ಆಯ್ತು ಹೋಗಿ ಬನ್ನಿ, ಇನ್ನೊಮ್ಮೆ ಈ ದಾರಿಯಲ್ಲಿ ಬಂದಾಗ ತಪ್ಪದೇ ಮನೆಗೆ ಬರಬೇಕೆಂದು" ಹೆಂಗಸು ಆಗ್ರಹಿಸುತ್ತಾಳೆ. ಯೋಧ ಇನ್ನೇನು ಕುದುರೆಯೇರಿ ಹೊರಡಬೇಕೆನಿಸುವಷ್ಟರಲ್ಲಿ ಹೆಂಗಸು "ನಿಮ್ಮ ಹೆಸರು ಕೇಳುವುದನ್ನೇ ಮರೆತುಬಿಟ್ಟೆ... ಅರಳಿದ ಮಲ್ಲಿಗೆ ಹೂವನ್ನೂ ಕಂಡು, ಕೋಗಿಲೆಯ ಧ್ವನಿ ಕೇಳಿ ನೀವು ಭಾವಪರವಶರಾದದ್ದು ಏಕೆ?' ಎಂದು ಪ್ರಶ್ನಿಸುತ್ತಾಳೆ. ಯೋಧ ನಸುನಕ್ಕು "ಬೀಸಿ ಬಂದ ತಂಗಾಳಿ, ಕೋಗಿಲೆ ಇಂಪು, ಮಾವಿನೆಳೆಚಿಗುರಿನ ಮಲ್ಲಿಗೆಯ ಕಂಪುಗಳೆಲ್ಲವೂ ನನಗೆ ನನ್ನೂರು ಬನವಾಸಿಯನ್ನು ಮತ್ತೆ ನೆನಪಿಸಿದವು. ಯೋಧನ ದಾರಿಯಂತೆಯೇ ಕವಿಯ ದಾರಿಯ ಕೂಡ; ಯೋಧನೂ ಕವಿಯೂ ಆಗಿರುವ ನನ್ನ ಹೆಸರು ಪಂಪ' ಎಂದು ತನ್ನನ್ನು ಹೆಂಗಸಿಗೆ ಪರಿಚಯಿಸಿಕೊಳ್ಳುತ್ತಾನೆ.

**XIII.ಈ ಕೆಳಗಿನ ಗದ್ಯಭಾಗವನ್ನು ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. 4=(2+2)**

ಮಳೆರಾಜನು ಸುರಿಸುವ ಮಳೆ ನೀರಿನಿಂದಲೇ ರೈತ ಆಹಾರಧಾನ್ಯಗಳನ್ನು ಬೆಳೆಯುತ್ತಾನೆ. ಲತೆಗಳು ಹೂವುಗಳನ್ನು ಕೊಡುತ್ತವೆ. ಗಿಡಮರಗಳು ಹಣ್ಣುಹಂಪಲುಗಳನ್ನು ಕೊಡುವವು. ಹೊಳೆ ಕೆರೆಗಳು ನೀರು ಕೊಡುವುದು ಮಳೆರಾಜನ ಕೃಪೆಯಿಂದಲೇ. ಸಕಲ ಜೀವಿಗಳನ್ನು ರಕ್ಷಿಸುವ ರಾಜನೆಂದರೆ ಅದು ಮಳೆರಾಯನೇ ಆಗಿರುತ್ತಾನೆ. ಹೀಗೆ ಅನ್ನ ನೀರು

ನೀಡುವ ಮಳೆರಾಯ ನಮ್ಮ ಪ್ರಕೃತಿಗೆ ವರವಾಗಿದ್ದಾನೆ. ನಮ್ಮ ಶಾರೀರಿಕ ಆರೋಗ್ಯ ಚೆನ್ನಾಗಿರಲು ಒಳ್ಳೆಯ ಶುಚಿಯಾದ ಆಹಾರ ಹಾಗೂ ಸ್ವಚ್ಛ ನೀರು ಬೇಕು. ಅನುಭವಿಗಳು ಇದನ್ನೆ "ಕೂಳು ಕುತ್ತು; ನೀರು ಪಿತ್ತು" ಅಂದಿದ್ದಾರೆ. ಅಂದರೆ ಅಶುದ್ಧವಾದ ಆಹಾರ ಹಾಗೂ ಹೊಲಸು ನೀರು ನಮ್ಮ ಶರೀರವನ್ನು ರೋಗಮಯ ಮಾಡುತ್ತವೆ. ಸತ್ತ್ವಯುತ ಬಿಸಿಬಿಸಿಯಾದ, ಹಿತಮಿತವಾದ ಆಹಾರ ಹಾಗೂ ಪರಿಶುದ್ಧವಾದ ನೀರು ಆರೋಗ್ಯಪೂರ್ಣ ಬೆಳವಣಿಗೆಯ ಮುಖ್ಯವಸ್ತುಗಳಾಗಿವೆ.

**ಪ್ರಶ್ನೆಗಳು :**

**43. ಅ) ಮಾನವನ ಶರೀರವನ್ನು ಆರೋಗ್ಯಪೂರ್ಣವಾಗಿಸಲು ಅವಶ್ಯವಾದ ವಸ್ತುಗಳಾವುವು?**

**ಉತ್ತರ :** ನಮ್ಮ ಶಾರೀರಿಕ ಆರೋಗ್ಯ ಚೆನ್ನಾಗಿರಲು ಒಳ್ಳೆಯ ಶುಚಿಯಾದ ಆಹಾರ ಹಾಗೂ ಸ್ವಚ್ಛ ನೀರು ಬೇಕು. ಅನುಭವಿಗಳು ಇದನ್ನೆ "ಕೂಳು ಕುತ್ತು; ನೀರು ಪಿತ್ತು" ಅಂದಿದ್ದಾರೆ. ಅಂದರೆ ಅಶುದ್ಧವಾದ ಆಹಾರ ಹಾಗೂ ಹೊಲಸು ನೀರು ನಮ್ಮ ಶರೀರವನ್ನು ರೋಗಮಯ ಮಾಡುತ್ತವೆ. ಸತ್ತ್ವಯುತ ಬಿಸಿಬಿಸಿಯಾದ, ಹಿತಮಿತವಾದ ಆಹಾರ ಹಾಗೂ ಪರಿಶುದ್ಧವಾದ ನೀರು ಆರೋಗ್ಯಪೂರ್ಣ ಬೆಳವಣಿಗೆಯ ಮುಖ್ಯವಸ್ತುಗಳಾಗಿವೆ.

**ಆ) 'ಮಳೆರಾಯ ನಮ್ಮ ಪ್ರಕೃತಿಗೆ ವರವಾಗಿದ್ದಾನೆ' ಹೇಗೆ ?**

**ಉತ್ತರ :** ಮಳೆರಾಜನು ಸುರಿಸುವ ಮಳೆ ನೀರಿನಿಂದಲೇ ರೈತ ಆಹಾರಧಾನ್ಯಗಳನ್ನು ಬೆಳೆಯುತ್ತಾನೆ. ಲತೆಗಳು ಹೂವುಗಳನ್ನು ಕೊಡುತ್ತವೆ. ಗಿಡಮರಗಳು ಹಣ್ಣುಹಂಪಲುಗಳನ್ನು ಕೊಡುವವು. ಹೊಳೆ ಕೆರೆಗಳು ನೀರು ಕೊಡುವುದು ಮಳೆರಾಜನ ಕೃಪೆಯಿಂದಲೇ. ಸಕಲ ಜೀವಿಗಳನ್ನು ರಕ್ಷಿಸುವ ರಾಜನೆಂದರೆ ಅದು ಮಳೆರಾಯನೇ ಆಗಿರುತ್ತಾನೆ. ಹೀಗೆ ಅನ್ನ ನೀರು ನೀಡುವ ಮಳೆರಾಯ ನಮ್ಮ ಪ್ರಕೃತಿಗೆ ವರವಾಗಿದ್ದಾನೆ.

**XIV. ಈ ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನಾಧರಿಸಿ ಪತ್ರ ಬರೆಯಿರಿ. 1*5=5**

44. ನಿಮ್ಮನ್ನು ಬಳ್ಳಾರಿಯ ಸರ್ಕಾರಿ ಪ್ರೌಢಶಾಲೆಯಲ್ಲಿ ಓದುತ್ತಿರುವ ಸುರಭಿ ಎಂದು ಭಾವಿಸಿಕೊಂಡು ನಿಮ್ಮ ಶಾಲೆಯಲ್ಲಿ ನಡೆದ ಚಿತ್ರಕಲೆ ಸ್ಪರ್ಧೆಯನ್ನು ಕುರಿತು ಮೈಸೂರಿನಲ್ಲಿರುವ ನಿಮ್ಮ ಸ್ನೇಹಿತ/ಸ್ನೇಹಿತೆಗೊಂದು ಪತ್ರ ಬರೆಯಿರಿ.

**ಉತ್ತರ :**

ಸುರಭಿ
9ನೇ ತರಗತಿ
ಸರ್ಕಾರಿ ಪ್ರೌಢಶಾಲೆ ಬಳ್ಳಾರಿ
ದಿನಾಂಕ : 03.10.2022

ನನ್ನ ಪ್ರೀತಿಯ ಸ್ನೇಹಿತೆ/ತ ಮಧು.

ನಾನು ಇಲ್ಲಿ ಆರೋಗ್ಯವಾಗಿದ್ದೇನೆ. ನೀನು ಚೆನ್ನಾಗಿದ್ದೀಯಾ ಎಂದು ಭಾವಿಸಿರುತ್ತೇನೆ. ನನ್ನ ಓದು ಉತ್ತಮವಾಗಿ ನಡೆಯುತ್ತಿದೆ. ನೀನು ಕೂಡ ಉತ್ತಮವಾಗಿ ಓದುತ್ತಿದ್ದೀಯಾ ಎಂದುಕೊಂಡಿರುತ್ತೇನೆ. ದಿನಾಂಕ : 01.09.2022 ರಂದು ಸ್ವಾತಂತ್ರ್ಯದ ಅಮೃತ ಮಹೋತ್ಸವ ಪ್ರಯುಕ್ತ ನಮ್ಮ ಶಾಲೆಯಲ್ಲಿ ಚಿತ್ರಕಲೆ ಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು. ಅದರಲ್ಲಿ ನಾನು ಭಾಗವಹಿದ್ದೆನು. ಭಾರತದ ನಕ್ಷೆಯೊಂದಿಗೆ ಭಾರತದ ಭಾವುಟ, ರಾಷ್ಟ್ರನಾಯಕರ ಚಿತ್ರಗಳನ್ನು ಬಿಡಿಸಿದ್ದೆನು. ಅದು ರಾಷ್ಟ್ರಭಕ್ತಿಯನ್ನು ಬೆಳೆಸಲು ಸಹಕಾರಿಯಾಗುತ್ತದೆ. ನನಗೆ ಪ್ರಥಮ ಬಹುಮಾನ ಬಂದಿತು ಎಂದು ಹೇಳಲು ಸಂತೋಷವಾಗುತ್ತಿದೆ.

ಇಂತಿ ನಿನ್ನ ಪ್ರೀತಿಯ ಗೆಳೆಯ/ಗೆಳತಿ
ಸುರಭಿ

**ಹೊರ ವಿಳಾಸ**

ಮಧು
9ನೇ ತರಗತಿ
ಸರ್ಕಾರಿ ಪ್ರೌಢಶಾಲೆ, ಕುವೆಂಪು ನಗರ
ಮೈಸೂರು –01

**ಅಥವಾ**

ನಿಮ್ಮನ್ನು ಬಾಗಲಕೋಟೆಯ ಸರ್ಕಾರಿ ಪ್ರೌಢಶಾಲೆಯಲ್ಲಿ ಓದುತ್ತಿರುವ ಕಿರಣ ಎಂದು ಭಾವಿಸಿಕೊಂಡು ನಿಮ್ಮ ಶಾಲೆಯಲ್ಲಿ ನಡೆಯುವ ಗಿಡನೆಡುವ ಕಾರ್ಯಕ್ರಮಕ್ಕೆ ಆಹ್ವಾನಿಸಿ ನಿಮ್ಮ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೊಂದು ಪತ್ರ ಬರೆಯಿರಿ.

ಇವರಿಂದ

ಕಿರಣ

9ನೇ ತರಗತಿ

ಸರ್ಕಾರಿ ಪ್ರೌಢಶಾಲೆ, ಬಾಗಲಕೋಟೆ

ಇವರಿಗೆ

ಜಿಲ್ಲಾಧಿಕಾರಿಗಳು

ಜಿಲ್ಲಾಧಿಕಾರಿಗಳ ಕಾರ್ಯಾಲಯ

ಬಾಗಲಕೋಟೆ

ಮಾನ್ಯರೇ

ವಿಷಯ : ಶಾಲೆಯಲ್ಲಿ ನಡೆಯುವ ಗಿಡನೆಡುವ ಕಾರ್ಯಕ್ರಮಕ್ಕೆ ಆಹ್ವಾನಿಸಿ.

ಈ ಮೇಲಂಡ ವಿಷಯಕ್ಕೆ ಸಂಬಂಧಿಸಿದಂತೆ ದಿನಾಂಕ 10.10.2022 ರ ಸೋಮವಾರ ಬೆಳಗ್ಗೆ 10 ಗಂಟೆಗೆ ಪರಿಸರ ಬೆಳೆಸಿ ನಾಡು ಉಳಿಸಿ ಎನ್ನುವ ಧ್ಯೇಯಯೊಂದಿಗೆ ನಮ್ಮ ಶಾಲೆಯಲ್ಲಿ ಗಿಡ ನೆಡುವ ಕಾರ್ಯಾಕ್ರಮವನ್ನು ಆಯೋಜಿಸಿದ್ದೇವೆ. ಈ ಕಾರ್ಯಕ್ರಮಕ್ಕೆ ತಾವು ಮುಖ್ಯ ಅತಿಥಿಗಳಾಗಿ ಆಗಮಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ಮನವಿ ಮಾಡಿಕೊಳ್ಳಲಾಗಿದೆ.

ಧನ್ಯವಾದಗಳೊಂದಿಗೆ

ದಿನಾಂಕ : 03.10.2022 — ತಮ್ಮ ವಿಶ್ವಾಸಿ

ಸ್ಥಳ : ಬಾಗಲಕೋಟೆ — ಕಿರಣ

**XV. ಈ ಕೆಳಗಿನ ವಿಷಯಗಳಲ್ಲಿ ಯಾವುದಾದರೂ ಒಂದನ್ನು ಕುರಿತು ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ. 1*5=5**

**45. ವರದಕ್ಷಿಣೆ ಒಂದು ಸಾಮಾಜಿಕ ಪಿಡುಗು**

**ಪೀಠಿಕೆ** : ವಿವಾಹದ ಸಂದರ್ಭದಲ್ಲಿ ಅಥವಾ ಮುಂಚಿತವಾಗಿ ವಧುವಿನ ಕಡೆಯವರು ವರನಿಗೆ ನೀಡುವ ಹಣ, ಬಂಗಾರ, ವಸ್ತ್ರಗಳು, ನಿವೇಶನ, ವಾಹನ, ಉದ್ಯೋಗ ಕೊಡಿಸುವ ಭರವಸೆ ಮುಂತಾದ ಉಡುಗೊರೆಗಳನ್ನು **'ವರದಕ್ಷಿಣೆ'** ಎನ್ನುವರು. ಈಗಿನ ಸಮಾಜದಲ್ಲಿ ಇದೊಂದು **'ಪ್ಯಾಶನ್ ಪಿಡುಗು'** ಎಂದೇ ಹೇಳಬಹುದು. ಇದೊಂದು ಸಾಮಾಜಿಕ ಪಿಡುಗಾಗಿದ್ದು, ಸಮಾಜದಲ್ಲಿ ಹೆಣ್ಣು ಹೆತ್ತ ಬಡವರು ತಮ್ಮ ಮಗಳ ಮದುವೆ ಮಾಡಲು ಕಣ್ಣೀರು ಸುರಿಸುವುದರೊಂದಿಗೆ ಯಮಪಾಶವಾಗಿದೆ.

**ವಿಷಯ ನಿರೂಪಣೆ**: ಮಾನವನ ಭೋಗ ಲಾಲಸೆಗೆ ಎಷ್ಟಿದ್ದರೂ ಸಾಲದು. ಅದು ಮದುವೆಯಾಗುವಾಗ ವಧುವಿನ ಕಡೆಯವರನ್ನು ವರದಕ್ಷಿಣೆಗಾಗಿ ಪೀಡಿಸುವುದು ಸಾಮಾನ್ಯವಾಗಿ ಬಿಟ್ಟಿದೆ. ಪೋಷಕರು ಮಗಳ ಸುಖವಾಗಿರಲೆಂದು ವರದಕ್ಷಿಣೆ ನೀಡುವುದು ಅಷ್ಟೆ ಸಾಮಾನ್ಯವಾಗಿದೆ. ಇದರಿಂದ ಹೆಣ್ಣು ಮಕ್ಕಳು ಹುಟ್ಟುವುದೇ ಬೇಡವೆಂಬ ಮನೋಭಾವ ಬಡವರಲ್ಲಿ ಹುಟ್ಟುವಂತೆ ಮಾಡಿದೆ. ಕಾನೂನಿನ ಪ್ರಕಾರ ವರದಕ್ಷಿಣೆ ಕೊಡುವುದು ಮತ್ತು ತೆಗೆದುಕೊಳ್ಳುವುದು ಅಪರಾದ. 1961ರಲ್ಲಿಯೇ ವರದಕ್ಷಿಣೆ ವಿರೋಧಿ ಕಾನೂನನ್ನು ಜಾರಿಗೆ ತಂದಿದ್ದರೂ ಅದನ್ನು ಸರಿಯಾಗಿ ಬಳಸಲು ಕನ್ಯಾಪಿತೃಗಳು ಮುಂದೆ ಬರುತ್ತಿಲ್ಲ. ಏಕೆಂದರೆ ತಮ್ಮ ಮಗಳ ಮುಂದಿನ ಜೀವನ ನಡೆಯುವುದು ಕಷ್ಟವಾಗುತ್ತದೆ ಎಂದು ಹೆದರುತ್ತಾರೆ. ದಿನನಿತ್ಯ ಸಮೂಹ ಮಾಧ್ಯಮಗಳಲ್ಲಿ ವರದಕ್ಷಿಣೆಯ ಕಿರುಕುಳದ ಆರೋಪಗಳು

ಬರುತ್ತಿರುತ್ತವೆ. ಕೆಲವರಿಗೆ ಶಿಕ್ಷೆಯಾದ ಬಗ್ಗೆ ಪ್ರಕರಣಗಳು ಇವೆ, ಆದರೂ ಈ ಪಿಡುಗನ್ನು ಸಂಪೂರ್ಣವಾಗಿ ನಿವಾರಣೆ ಮಾಡುವುದು ಸಾಧ್ಯವಾಗುತ್ತಿಲ್ಲ. ಇದನ್ನು ನಿವಾರಿಸಬೇಕಾದರೆ ಇಂದಿನ ಹೆಣ್ಣು ಮಕ್ಕಳು ಸ್ವಾವಲಂಬನೆ ಹಾದಿಯನ್ನು ತುಳಿಯಲು ಸಿದ್ಧರಾಗಬೇಕು, ಸಮಾನತೆಗಾಗಿ ಹೋರಾಡುವ ಸ್ತ್ರೀಸಂಘಗಳು ವರದಕ್ಷಣೆ ಕೊಡುವ ವಿಚಾರಗಳನ್ನು ಮುಂದಿಟ್ಟುಕೊಂಡು ಹೋರಾಡಿ ಹೋಗಲಾಡಿಸಬೇಕು. ಹೆಣ್ಣು ಅಬಲೆಯಲ್ಲ ಸಬಲೆ ಎಂಬ ಧೈರ್ಯ ಹೆಣ್ಣು ಮಕ್ಕಳಲ್ಲಿ ಮೂಡುವುದು ಅನಿವಾರ್ಯವಾಗಿದೆ. ಒಟ್ಟಿನಲ್ಲಿ ಹೆಣ್ಣು ಮಕ್ಕಳು ವಿದ್ಯಾವಂತರಾಗಿ, ತಾವು ದುಡಿಮೆ ಮಾಡಲು ಕಲಿತರೆ ಯಾವುದೇ ಸ್ವಾಯತ್ತ ಜೀವನ ನಡೆಸಬಹುದಾಗಿದೆ. ಹೆಣ್ಣು ಮಕ್ಕಳು ತನ್ನ ಕಾಲ ಮೇಲೆ ತಾನು ನಿಲ್ಲುವಷ್ಟು ಆರ್ಥಿಕ ಸ್ವಾವಲಂಬನೆ ಪಡೆದರೆ ವರದಕ್ಷಿಣೆ ಪಿಡುಗು ತನ್ನಿಂತಾನೇ ನಿರ್ಮೂಲನೆ ಹೊಂದುತ್ತದೆ. ಅದಕ್ಕಿಂತ ಹೆಚ್ಚಿನದಾಗಿ ವಿದ್ಯಾವಂತ ಯುವಕರು ವರದಕ್ಷಿಣೆ ಪಡೆಯುವುದನ್ನು ತ್ಯಜಿಸಿ ಸಮಾಜಕ್ಕೆ ಮಾದರಿಯಾಗಬೇಕು. ಮತ್ತು ಸರ್ಕಾರಗಳು ಪ್ರಬಲ ಕಾನೂನು ಜಾರಿಗೊಳಿಸಬೇಕು.

**ಉಪಸಂಹಾರ** : ಒಟ್ಟಿನಲ್ಲಿ ಸಮಾಜಕ್ಕೆ ಅಂಟಿಕೊಂಡಿರುವ ವರದಕ್ಷಿಣೆ ಪಿಡುಗನ್ನು ಸಮಾಜದಿಂದ ಕಿತ್ತು ಹಾಕಬೇಕು. **ಪರಿವರ್ತನೆಯೇ ಜಗದ ನಿಯಮ** ಎನ್ನುವಂತೆ ಸುಸಂಸ್ಕೃತ ಭಾರತದ ನಾಗರಿಕರಾದ ನಾವು ನಮ್ಮ ಮನಸ್ಸನ್ನು ಬದಲಾಯಿಸಿಕೊಂಡು ವರದಕ್ಷಿಣೆ ಪಡೆಯುವುದು ಮತ್ತು ಕೊಡುವುದನ್ನು ತಿರಸ್ಕರಿಸಿ ಪ್ರಜ್ಞಾವಂತರಾಗಿ ಬಾಳಬೇಕು. ಕಾನೂನಿನ ಅರಿವು ಮೂಡಿಸಿ ಸಮಾಜದ ಜನರನ್ನು ಎಚ್ಚರಗೊಳಿಸಿ, ಸ್ತ್ರೀ–ಪುರುಷರಲ್ಲಿ ಅಭೇದತೆಯನ್ನು ಮೂಡಿಸಿ ಸತಿಪತಿಗಳೊಂದಾಗಿ ಬಾಳುವಂತೆ, ಸಂಸಾರಗಳು ಗಟ್ಟಿಗೊಳ್ಳುವಂತೆ ಮಾಡಬೇಕು ಎನ್ನುವುದು ಎಲ್ಲರ ಆಶಯವಾಗಬೇಕು.

**ಅಥವಾ**

**ಪರಿಸರ ಸಂರಕ್ಷಣೆಯಲ್ಲಿ ವಿದ್ಯಾರ್ಥಿಗಳ ಪಾತ್ರ**

**ಪೀಠಿಕೆ :** ನಾವು ಮತ್ತು ನಮ್ಮ ಸುತ್ತ ಮುತ್ತಲಿನ ಬೆಟ್ಟ–ಗುಡ್ಡ, ಕಲ್ಲು–ಮಣ್ಣು, ಮರ–ಗಿಡ, ನೀರು ವಾಯು, ಪ್ರಾಣಿ–ಪಕ್ಷಿ ಚರಾಚರ ವಸ್ತುಗಳನ್ನು ಪರಿಸರ ಎಂದು ಕರೆಯಬಹುದು. ಇಂತಹ ಪರಿಸರವನ್ನು ಸಂರಕ್ಷಿಸುವ ವಿಚಾರದಲ್ಲಿ ವಿದ್ಯಾರ್ಥಿಗಳ ಪಾತ್ರ ಮಹತ್ತ್ವದ್ದು.

**ವಿಷಯ ನಿರೂಪಣೆ:** ಹೆಚ್ಚುತ್ತಿರುವ ಜನಸಂಖ್ಯೆ, ಪರಿಸರ ಮತ್ತು ಸ್ವಚ್ಛತೆ ಮಹತ್ವದ ಅರಿವಿಲ್ಲದಿರುವುದು, ಅಜ್ಞಾನ, ಮೂಢನಂಬಿಕೆಗಳು, ವಸ್ತುಗಳ ಮರುಬಳಕೆಯಲ್ಲಿ ಅಸಡ್ಡೆ, ಅತಿ ವಾಹನಗಳ ಬಳಕೆ, ಕಾರ್ಖಾನೆಗಳ ಅಸುರಕ್ಷಿತ ಕಾರ್ಯಗಳು, ಕಾಡುಗಳ ನಾಶ, ನಗರ ನಿರ್ಮಾಣ ಇತ್ಯಾದಿ ಕಾರ್ಯಗಳು ಪರಿಸರ ಮಾಲಿನ್ಯಕ್ಕೆ ಕಾರಣವಾಗುತ್ತಿವೆ. ಇಂತಹ ಸಂದರ್ಭಗಳಲ್ಲಿ ಶಾಲಾ–ಕಾಲೇಜಿನ ವಿದ್ಯಾರ್ಥಿಗಳು ಪರಿಸರ ಸಂರಕ್ಷಣೆಯ ಕುರಿತು ಜಾಥ, ಪರಿಸರದ ಅರಿವನ್ನು ಹೊಂದಿರುವ ನಾಟಕ ಪ್ರದರ್ಶನ, ಸಸಿ ನೆಡುವ ಕಾರ್ಯಕ್ರಮಗಳನ್ನು ಏರ್ಪಡಿಸಿ ಪರಿಸರದ ಸಂರಕ್ಷಣೆಯ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಬಹುದು. ವಿದ್ಯಾರ್ಥಿಗಳು ತಮ್ಮ ತಮ್ಮ ಶಾಲಾ ಕಾಲೇಜುಗಳಲ್ಲಿ ಪ್ರತಿದಿನ ಪರಿಸರ ದಿನವನ್ನಾಗಿ ಮಾಡುತ್ತ ಸಸಿ ನೆಡುವ ಕಾರ್ಯಕ್ರಮಗಳನ್ನು ಏರ್ಪಡಿಸಿ ಶಾಲಾ– ಕಾಲೇಜುಗಳಲ್ಲಿ ಮರ ಗಿಡಗಳನ್ನು ಬೆಳೆಸಬಹುದು. ಮರಗಿಡಗಳನ್ನು ದತ್ತು ತೆಗೆದುಕೊಂಡು ಪ್ರತಿ ನಿತ್ಯ ನೀರುಣಿಸಿ, ಉತ್ತಮವಾಗಿ ಬೆಳಸಿ ಪರಿಸರಕ್ಕೆ ಕೊಡುಗೆಯಾಗಿ ನೀಡಬಹುದು. ಶಾಲಾ ಕಾಲೇಜುಗಳಿಗೆ ವಿದ್ಯಾರ್ಥಿಗಳು ಹೋಗುವಾಗ ಮೋಟರ್ ಸೈಕಲ್‌ಗಳನ್ನು ಬಳಸುವ ಬದಲು ಸೈಕಲ್‌ಗಳಲ್ಲಿ ಬರಬಹುದು. ಇದರಿಂದ ವಾಯುಮಾಲಿನ್ಯ ತಡೆಗಟ್ಟಲು ಅಲ್ಪ ಕಾಣಿಕೆ ಸಲ್ಲಿಸಬಹುದು.

ಪರಿಸರ ಸಂರಕ್ಷಣೆ ಮಾಡುವುದು ಎಲ್ಲರ ಕರ್ತವ್ಯವಾಗಬೇಕು. ಪ್ರತಿಯೊಬ್ಬರಲ್ಲೂ ಪರಿಸರದ ಕಾಳಜಿಯ ಬಗ್ಗೆ ಅರಿವು ಮೂಡಿಸುವ ಯೋಜನೆ ಆಗಬೇಕು. ಕಾಡುಗಳನ್ನು ನಾಶಮಾಡಬಾರದು, ಬೆಳೆಸಬೇಕು. ಕಾಡುಗಳಿದ್ದರೆ ನಾಡು ಸುರಕ್ಷತವಾಗಿರಲು ಸಾಧ್ಯ. ಹೆಚ್ಚು ಹೆಚ್ಚು ಗಿಡಗಳನ್ನು ಬೆಳೆಸಬೇಕು. ನೀರಿನ ಮಿತಬಳಕೆ, ವಾಹನಗಳ ಮಿತಬಳಕೆ, ಕಾರ್ಖಾನೆಗಳಿಂದ ಮಾಲಿನ್ಯವಾಗದಂತೆ ಪರ್ಯಾಯ ವ್ಯವಸ್ಥೆಗಳನ್ನು ಕೈಗೊಳ್ಳುವುದು. ನೀರು, ಪ್ಲಾಸ್ಟಿಕ್, ಕಬ್ಬಿಣದಂತಹ ವಸ್ತುಗಳನ್ನು ಮರುಬಳಕೆಮಾಡುವ ವ್ಯವಸ್ಥೆಯನ್ನು ರೂಪಿಸುವುದು ವಿದ್ಯಾರ್ಥಿಗಳ ಜವಬ್ದಾರಿಯಾಗಬೇಕು.

**ಉಪಸಂಹಾರ : 'ಕಾಡಿದ್ದರೆ ನಾಡು–ನಾಡಿದ್ದರೆ ನಾವು'** ಪರಿಸರ ಸಂರಕ್ಷಣೆ ನಮ್ಮೆಲ್ಲರ ಹೊಣೆ. ವಿದ್ಯಾರ್ಥಿಗಳಾದ ನಾವು ಪರಿಸರ ಸಂರಕ್ಷಣೆ ಅರಿವನ್ನು ಮೂಡಿಸಿಕೊಂಡು ಪ್ರತಿಯೊಬ್ಬರಲ್ಲೂ ಜಾಗೃತಿಯನ್ನು ತರಬೇಕು. ಮೊದಲು ನಮ್ಮಸುತ್ತ–ಮುತ್ತ, ಮನೆ, ಶಾಲಾ–ಕಾಲೇಜು, ಗ್ರಾಮಗಳಲ್ಲಿ ಹೆಚ್ಚಿನ ಗಿಡಗಳನ್ನು ನೆಟ್ಟು ಬೆಳೆಸಬೇಕು. ಇತರರಿಗೂ ಬೆಳೆಸಲೂ ಪ್ರೇರಕರಾಗಬೇಕು. ಅಂದಾಗ ಪರಿಸರ ಉಳಿಯಲು, ಬೆಳೆಯಲು ಸಾಧ್ಯವಾಗುತ್ತದೆ ಎಂಬುದೆ ನಮ್ಮೆಲ್ಲರ ಆಶಯವಾಗಬೇಕಿದೆ.

**'ಶಾಲೆಗೊಂದು ಮಗು ಮಗುವಿಗೊಂದು ಮರ'**